ಅಪರಂಜಿ

ತಿಳಿನಗೆಯ ಕಾರಂಜಿ







ಇಷ್ಟು ದಿನ ಎಟಿಎಂಗಳಲ್ಲಿ ಜನ ದುಡ್ಡು ಡ್ರಾ ಮಾಡ್ತಿದ್ದರು.

ಈಗ ಎಟಿಎಂ ಅನ್ನೇ ಡ್ರಾ ಮಾಡ್ತಿದ್ದಾರೆ.

ಬಿಡಿ ಪ್ರತಿ: ರೂ. 10.00

ಅಪರಂಜಿ

ತಿಳಿನಗೆಯ ಕಾರಂಜಿ

ಸಂಪುಟ 28

ಸಂಚಿಕೆ - 3

ಡಿಸೆಂಬರ್ - 2010



ಚಂದಾ ವಿವರ:

ಬಿಡಿ ಪ್ರತಿ: ರೂ. 10/-

ವಾರ್ಷಿಕ ಚಂದಾ: ರೂ. 100/-

ಹತ್ತು ವರ್ಷದ ಚಂದಾ: ರೂ. 750/-

ಕೆಲಸದ ವೇಳೆ:

ಬೆಳಗ್ಗೆ 8 ರಿಂದ 10 ಗಂಟೆಯವರೆಗೆ

ಮುದ್ರಣ: ರವಿ ಗ್ರಾಫಿಕ್ಸ್

ಅಕ್ಷರ ಜೋಡಣೆ:

ಒಮೇಗಾ ಲೇಸರ್ ಟೆಕ್


ಈ ಸಂಚಿಕೆಯಲ್ಲಿ.....

ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560 003. email: aparanji@hotmail.com

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ, ನಂ. 96, 'ಸುಕೇತನ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು - 560 068. ದೂರವಾಣಿ: 080-26688488. email: brmurthy@dataone.in

ಅಪರಂಜಿ ಕಿಡಿ

● ಪ್ರಕಾಶ್



ದಕ್ಷಿಣ ಧ್ರುವಕ್ಕೆ ವಿಜ್ಞಾನಿಗಳ ತಂಡ – ಸುದ್ದಿ

● **ಕುವೆಂಪು ನಸುನಕ್ಕರಂತೆ !!**

★★★

ಮೆಟ್ರೋ ಹಾದಿಗೆ ಕೋರ್ಟ್ ನಿಶಾನೆ – ಪತ್ರಿಕೆ

● **KSCA was courting trouble ಅಂತ ಅಪರಂಜಿ ನಸುನಕ್ಕಳಂತೆ !!**

★★★

ಮಂತ್ರಿ ಮಾಲ್ ನಿಯಮ ಉಲ್ಲಂಘನೆ ಆರೋಪ – ಸುದ್ದಿ

● **ಯಥಾ ಪಾಲಿಕೆ, ತಥಾ ಪ್ರಜಾಃ !!**

★★★

"ಅಶಿಸ್ತು ಸಲ್ಲ" ಬಿ.ಜೆ.ಪಿ. ಸಭೆಯಲ್ಲಿ ಅಧ್ಯಕ್ಷರು – ಪತ್ರಿಕೆ

● **ಶಿಸ್ತು ಇದ್ದದ್ದು ಯಾವಾಗ ಸಾರ್ ?!**

★★★

ಆದರ್ಶ ಗೃಹ ನಿರ್ಮಾಣ ಹಗರಣ – ಪತ್ರಿಕೆ

● **"ಸೇನೆಯೇ ಎದ್ದು ಹೊಲ ಮೇಯ್ದಂತೆ" ಅನ್ನಬಹುದು ಈಗ !!**

★★★

ಬೆಂಗಳೂರು ಏರ್‌ಪೋರ್ಟ್‌ಗೆ ಹೋಗುವವರೆಲ್ಲಾ "ಬಂದ ದಾರಿಗೆ ಸುಂಕ ಇದೆ" ಎನ್ನಬೇಕು ಈಗ !!

★★★

"ಜಿಪುಣತನ ಅನುವಂಶಿಕ" – ವಿಜ್ಞಾನಿಗಳು

● **ಹಾಗೇ ಕಾಣುತ್ತೆ !!**

★★★

ಎಚ್ಚೆತ್ತ ಸರ್ಕಾರದಿಂದ "ಸುಗ್ರೀವಾಜ್ಞೆ" ವಾಪಸ್ – ಪತ್ರಿಕೆ

● **ಸದ್ಯ, ಸರಿಯಾದ ಕಡೆ ವಾಲಿ-ದರಲ್ಲ !!**

★★★

“ನಮ್ಮ ನಿಮ್ಮಲ್ಲಿ”

ದಿನಬೆಳಗಾದರೆ ಅದೇ ಬರ್ಖಾ, ಅದೇ ರಾಜದೀಪ್, ಅದೇ ವಿಕ್ರಮ್ ಚಂದ್ರಾ, ಟಿ.ವಿ. ತೆರೆಯನ್ನು ಆಕ್ರಮಿಸಿ ನಮಗೆಲ್ಲಾ ಭ್ರಷ್ಟಾಚಾರದ ಬಗ್ಗೆ ರಿಯಾಲಿಟಿ ಷೋ ಒದಗಿಸುತ್ತಿರುವುದು ಈ ಚಳಿಯ ದಿನಗಳಲ್ಲಿ ಹುರಿಗಾಳು ಮೆಲ್ಲುತ್ತಾ ಟಿ.ವಿ. ಮುಂದೆ ಕುಳಿತು ನೋಡಲು ಬಹು ಅಪ್ಯಾಯಮಾನ ಎಂಬುದನ್ನು ಯಾರೂ ಅಲ್ಲಗಳೆಯಲಾರರು. ಆದರೂ ನಮ್ಮ ದೇಶಕ್ಕೆ, ನಮ್ಮ ಜನಕ್ಕೆ, ಈ ಪಿಡುಗು ಯಾಕೆ, ಹೇಗೆ ಬಂತು, ಎಲ್ಲಿಂದ ಇದರ ನಿವಾರಣೆಯ ಕೆಲಸ ಪ್ರಾರಂಭಿಸಬೇಕು ಎಂಬೆಲ್ಲಾ ಮನಸ್ಸನ್ನು ತಲ್ಲಣಗೊಳಿಸುವ ಪ್ರಶ್ನೆಗಳು, ಇಂತಹ ರಿಯಾಲಿಟಿ ಷೋಗಳನ್ನು ಸಮಾಧಾನದಿಂದ ನೋಡುವುದಕ್ಕೂ ಬಿಡುವುದಿಲ್ಲ. ಹಾಗಾಗಿ ಮೊನ್ನೆ ಟಿ.ವಿ. ನೋಡುವುದನ್ನು ಅರ್ಧಕ್ಕೇ ನಿಲ್ಲಿಸಿ ಯಾವುದಾದರೂ ಲಘು ಓದಿನಿಂದ ಮನಸ್ಸನ್ನು ಹಗುರಗೊಳಿಸೋಣ ಅಂದುಕೊಂಡು ಪುಸ್ತಕದ ಕಪಾಟಿನ ಮೇಲೆ ಕಣ್ಣಾಡಿಸಿದೆ. ರಾ.ಶಿ. ಬರೆದ ''ಜಗ್ಗೋಜಿ'' ಪುಸ್ತಕ ಕಣ್ಣಿಗೆ ಬಿತ್ತು.

ರಾ.ಶಿ. ಈ ಪುಸ್ತಕವನ್ನು ಬರೆದದ್ದು ಅರವತ್ತರ ದಶಕದ ಪ್ರಾರಂಭದಲ್ಲಿ. ದೆವ್ವಗಳ ಕಳ್ಳರ ಕಥೆಗಳನ್ನು ಹೆಣೆಯುವುದರಲ್ಲಿ ರಾ.ಶಿ.ಯವರಿಗೆ ಬಹು ಆಸಕ್ತಿ. ''ಜಗ್ಗೋಜಿ'' ಕಾಲ್ಪನಿಕ ಕಳ್ಳನೊಬ್ಬನ ಕಥೆ. ವಿದುರಾಶ್ವತ್ಥದ ಬಳಿ ಇರುವ ಕೊಂಡೇನಕ ಪಲ್ಲಿ ಈ ಮಹಾನ್ ಕಳ್ಳನ ಕಾರ್ಯಕ್ಷೇತ್ರ. ಟಿಪ್ಪು ಸುಲ್ತಾನನ ಅವಸಾನದನಂತರದ ಮೈಸೂರು ಈ ಕಥಾಮಾಲಿಕೆಯ ಕಾಲ. ಆ ಕಾಲದ ಜನಜೀವನವನ್ನ ರಾ.ಶಿ. ಓದುಗನ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ಈ ಪುಸ್ತಕದ ಮೊದಲ ಪುಟದಲ್ಲಿನ ಪುಟ್ಟ ''ಮೊದಲನುಡಿ'' ಯಲ್ಲಿನ ಕೆಲವು ಸಾಲುಗಳನ್ನು ಸ್ವಲ್ಪ ನೋಡಿ.

“ಈಗಿನ ಕಾನೂನು ರಕ್ಷಣೆ ಹೊಂದಿದ ಸಮಾಜದಲ್ಲಿ ಮಾನವಾಗಿ ಬಾಳುವ, ಆದರೂ ದರೋಡೆಕೋರರಾದ, ಕಳ್ಳಕೊರಮರಿಗಿಂತಲೂ, ಹಿಂದೆ ಜೀವವನ್ನು, ಮಾನವನ್ನು ಮುಡುಪಾಗಿಟ್ಟು ಕಳ್ಳತನಮಾಡುತ್ತಿದ್ದವರು, ಉತ್ತಮ ಜೀವಿಗಳು ಎಂದೇ ನನ್ನ ಭಾವನೆ.''

''ಮುಂದೆ ಕಾಲ ಭೈರವಿ ಆಣತಿಯಿತ್ತರೆ, ಈಗಿನ ಸಮಾಜದ ದರೋರೋಡೆಕಾರರ, ಕಳ್ಳಕಾಕರ ನಿಧಿಯನ್ನು ಜಗ್ಗೋಜಿಯ ಮಗ ಬುದ್ಧೋಜಿಯಿಂದ ಸಂಗ್ರಹಿಸಬೇಕೆಂಬ ಕಿರಿಯಾಸೆ ಉಂಟು.......''

ಅರೆ, ನಮ್ಮ ಸೋಕಾಲ್ಡ್ ನಾಯಕರುಗಳ ಭ್ರಷ್ಟಾಚಾರವನ್ನು ಮರೆಯೋಣ ಅಂದುಕೊಂಡು ಈ ಪುಸ್ತಕ ಕೈಗೆ ತೆಗೆದುಕೊಂಡರೆ ಇಲ್ಲೂ ಪ್ರಾಫೆಟಿಕ್ಕಾಗಿ ಸಮಾಜದ ದರೋಡೆಕಾರರ ಬಗ್ಗೆನೇ ಮಾತನಾಡುತ್ತಿದ್ದಾರಲ್ಲಾ ರಾ.ಶಿ. ಎಂದುಕೊಳ್ಳುತ್ತಾ ಪುಟ ತಿರುವಿದೆ. ಹಾಗೆ ನೋಡಿದರೆ ಇದು ನನ್ನ ಮೊದಲ ಓದೇನೂ ಅಲ್ಲ, ನಾನು ಅನೇಕ ಬಾರಿ ಓದಿರುವ ಪುಸ್ತಕ ಇದು. ಒಮ್ಮೆ ಓದಿರುವ ಪುಸ್ತಕವನ್ನು ಮತ್ತೆ ಓದುವುದರಲ್ಲಿ ಒಂದು

ಸ್ವಾರಸ್ಯವಿದೆ. ಕಥೆ ಮುಂದೆ ಹೇಗೆ ಸಾಗುತ್ತದೆ ಎಂಬ ಕುತೂಹಲಕ್ಕಿಂತ ಪುಸ್ತಕದಲ್ಲಿ ವರ್ಣಿಸುವ ಪರಿಸರ, ಆಗಿನ ಜನಗಳ ನಂಬಿಕೆ ಹಾಗೂ ನಡವಳಿಕೆಗಳು ಇವುಗಳನ್ನು ನಿಧಾನವಾಗಿ ಓದಿ ಸವಿಯಬಹುದು. ಹೀಗೆ ಓದಿದಾಗ ಒಂದು ಅಂಶ ಎದ್ದು ಕಂಡಿತು. ಜಗ್ಗೋಜಿ ಕದಿಯಲು ಹವಣಿಕೆ ಹಾಕಿದ ನಿಧಿ, ನಗನಾಣ್ಯಗಳೆಲ್ಲವೂ ಹಿಂದಿನ ತಲೆಮಾರಿನ ಹಲವು ನಾಯಕರು ನೆಲದಲ್ಲಿ ಹೂತಿಟ್ಟ ಒಡವೆ ವಸ್ತುಗಳು, ದುಗ್ಗಾಣಿ, ಕಂಠೀರಾಯ ವರಾಹಗಳು. ಅಂದರೆ ಆಗಿನ ಕಾಲದಿಂದಲೂ ಬೆಲೆಬಾಳುವ ವಸ್ತುಗಳನ್ನ ಸಮಾಜದ ಒಳಿತಿಗೆ ಬಳಸುವ ಬದಲು, ಹಣವಂತ ಸ್ವಾರ್ಥಿಗಳು ತಮ್ಮ ಸಂತತಿಯವರಿಗೆ ಮುಂದೆ ಎಂದಾದರೂ ಉಪಯೋಗಕ್ಕೆ ಬರಲಿ ಎಂಬ ಇನ್‌ಸೆಕ್ಯೂರಿಟಿ ಮನೋಭಾವದಿಂದ ಬಚಿಟ್ಟ ಆಸ್ತಿ ಎಂಬ ಸಂಗತಿ ಬೆಳಕಿಗೆ ಬಂತು. ಈಗಿನ ದಿನಗಳಲ್ಲಿ ಸ್ವಿಸ್ ಬ್ಯಾಂಕ್‌ಗಳಿಗೆ ಕಳ್ಳತನದಲ್ಲಿ ಹರಿಯುತ್ತಿರುವ ಹಣಕ್ಕೂ, ಹಿಂದಿನವರು ನೆಲದಲ್ಲಿ ಹುದುಗಿಡುತ್ತಿದ್ದ ಆಸ್ತಿಗೂ ಏನು ವ್ಯತ್ಯಾಸ, ಈ ಚಾಳಿ ತಲತಲಾಂತರದಿಂದ ನಮಗೆ ಅಂಟಿದ್ದು ಅನ್ನಿಸಿತು.

ಅಷ್ಟು ಹೊತ್ತಿಗೆ ಮಿತ್ರ ಬೇಲೂರು ಮನೆಗೆ ಬಂದದ್ದರಿಂದ ನನ್ನ ಆಲೋಚನಾ ಸರಣಿಯನ್ನು ಅಲ್ಲಿಗೇ ತುಂಡರಿಸಬೇಕಾಯಿತು. ನನ್ನನ್ನು ಕರೆದುಕೊಂಡು ಅ.ರಾ.ಮಿತ್ರರ ಮನೆಗೆ ಹೋಗುವ ಸಲುವಾಗಿ ಬೇಲೂರ್ ಬಂದಿದ್ದ ಮಿತ್ರರನ್ನು ಭೇಟಿಮಾಡಿದ ತಕ್ಷಣ ನನ್ನ ಮನಸ್ಸನ್ನು ಕಾಡುತ್ತಿದ್ದ ಪ್ರಶ್ನೆಯನ್ನು ಅವರ ಮುಂದಿಡುತ್ತಾ, "ಅಲ್ಲಾ ಸಾರ್, ಇದು ಯಾಕೆ ಹೀಗೆ? ಈ ಭ್ರಷ್ಟಾಚಾರ ನಮ್ಮ ಜೀವಕಣಗಳಲ್ಲೇ ಬೆರೆತಿರೋ ಹಾಗೆ ಕಾಣುತ್ತಲ್ಲ. ಭಾರತೀಯರಾದ ನಾವು ಒಂದು ಒಳ್ಳೆಯ ಸಮಾಜ ಕಟ್ಟೋ ಪ್ರಯತ್ನದಲ್ಲಿ ಯಾವಾಗ ಹಾದಿ ತಪ್ಪಿದೆವು? ಜನಸಾಮಾನ್ಯನಿಗೆ ಒಂದು ನ್ಯಾಯಪರ ಆಡಳಿತ ಸಿಗೋದು ಯಾವಾಗ?" ಅಂತ ಕೇಳಿದೆ.

ಮಿತ್ರ ನಕ್ಕುಬಿಟ್ಟರು. "ಯಾವಾಗ ಹಾದಿ ತಪ್ಪಿದೆವು ಅಂತ ಕೇಳ್ತೀಯಲ್ಲಾ, ಹಾದಿ ಯಾವತ್ತೂ ತಪ್ಪೇ ಇಲ್ಲ. ತಲತಲಾಂತರದಿಂದಲೂ ಇದೇ ನಮ್ಮ ಹಾದಿ. ಕುಮಾರವ್ಯಾಸ ತನ್ನ ಭಾರತ ಕಥಾಮಂಜರೀಲಿ ನಮ್ಮ ಪ್ರಜೆಗಳ ಪರಿಸ್ಥಿತಿಯನ್ನ ಬಹು ಕಾವ್ಯಮಯವಾಗಿ ವರ್ಣಿಸಿದ್ದಾನೆ. ಒಮ್ಮೆ ನಾರದ ಮುನಿಗಳು ಧರ್ಮರಾಯನನ್ನು ನೋಡಲು ಬರುತ್ತಾರೆ. ಬಂದೊಡನೆಯೇ ಅವರು ರಾಜನ ಆಡಳಿತ ಪ್ರಜೆಗಳಿಗೆ ಕ್ಷೇಮ ತರುವಂತೆ ಇದೆಯೋ ಎಂಬುದನ್ನು ವಿಚಾರಿಸಿಕೊಳ್ಳುತ್ತಾರೆ. ಆ ಸಂದರ್ಭದ ಒಂದು ಷಟ್ಪದಿ.

ಅರಸು ರಾಕ್ಷಸ ಮಂತ್ರಿಯೆಂಬುವ
ಮೊರೆವ ಹುಲಿ ಪರಿವಾರ ಹದ್ದಿನ
ನೆರವಿ ಬಡವರ ಬಿನ್ನಪವನಿನ್ನಾರು ಕೇಳುವರು
ಉರಿ ಉರಿವುತಿದೆ ದೇಶ ನಾವಿ
ನ್ನಿರಲು ಬಾರದೆನುತ್ತ ಜನ ಬೇ
ಸರದ ಬೇಗೆಯಲಿರದೆಲಲೇ ಭೂಪಾಲ ಕೇಳೆಂದ

ರಾಜನೇ ರಾಕ್ಷಸ, ಮಂತ್ರಿ ಘರ್ಜಿಸುವ ಹುಲಿ, ಇವರ ಪರಿವಾರದವರು ಹದ್ದಿನ ಗುಂಪುಗಳು, ದೇಶ ಉರಿಯುತ್ತಿದೆ, ನಾವಿನ್ನಿರಬಾರದೆಂದು ಪ್ರಜೆಗಳು ಬೇಸರದ ಬೇಗೆಯಲ್ಲಿ ಬೇಯುತ್ತಿಲ್ಲ ತಾನೆ. ಎಂದು ನಾರದರು ಧರ್ಮರಾಯನನ್ನು ಕೇಳುತ್ತಾರೆ. ಧರ್ಮರಾಯನ ಆಳ್ವಿಕೆ ಹಾಗಿದ್ದಿರದಿಲ್ಲಬಹುದು. ಆದರೆ ನಮ್ಮ ನಾಡಿನಲ್ಲಿ ಅಂತಹ ಆಡಳಿತದ ಸಾಧ್ಯತೆಯನ್ನ ನಾರದ ಮುನಿಗಳೇ ನಿರೀಕ್ಷಿಸಿರುವಾಗ ಈಗಿನ ವಿದ್ಯಮಾನಗಳಲ್ಲಿ ಹೊಸದೇನಿದೆ'' ಅಂತ ಮಿತ್ರ ಕೇಳಿದರು.

ಅವರ ಮನೆಯಿಂದ ಹಿಂತಿರುಗಿದ ಮೇಲೆ ಮತ್ತೆ ಟಿ.ವಿ. ಹಚ್ಚಿದಾಗ ಸಿಎನ್‌ಎನ್, ಐಬಿಎನ್‌ನಲ್ಲಿ ಲೀಡರ್‌ಷಿಪ್ ಸಮಿಟ್ ಎಂಬ ಕಾರ್ಯಕ್ರಮ ಬಿತ್ತರವಾಗುತ್ತಿತ್ತು. ನಾನು ನೋಡಿದಾಗ ಬಿ.ಜೆ.ಪಿ.ಯ ಅರುಣ್ ಜೇಟ್ಲಿ ತಮ್ಮ ಭಾಷಣ ಮುಗಿಸಿ ವೇದಿಕೆಯಿಂದ ಕೆಳಗಿಳಿಯುತ್ತಿದ್ದರು. ಮುಂದಿನ ಭಾಷಣಕಾರ್ತಿ ಸಿ.ಪಿ.ಎಂ.ನ ಬೃಂದಾ ಕರಾಟ್ (ಅದೆಷ್ಟು ಅಗಲದ ಕುಂಕುಮ ರೀ ಈಕೆಗೆ). ಬೃಂದಾ ನಮ್ಮ ದೇಶದ ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಾ ಲಕ್ಷ ಕೋಟಿ ರೂಪಾಯಿಗಳಷ್ಟು ಹಣ ತೆರಿಗೆ ರಹಿತವಾಗಿ ಕಳ್ಳತನದಲ್ಲಿ ಸ್ವಿಸ್ ಬ್ಯಾಂಕುಗಳಿಗೆ ರವಾನೆಯಾಗುತ್ತಿದೆ. ಇದೇ ಹಣ ಸರ್ಕಾರಕ್ಕೆ ಸಿಗುವಂತಿದ್ದರೆ ದೇಶಾದ್ಯಂತ ಎಷ್ಟು ಆಸ್ಪತ್ರೆಗಳನ್ನ ಎಷ್ಟು ಶಾಲೆಗಳನ್ನ ದೇಶಾದ್ಯಾಂತ ಕಟ್ಟಿಸಬಹುದಾಗಿತ್ತು ಅಂತ ಕಳಕಳಿಯಿಂದ ಹೇಳಿದರು. ಇದಕ್ಕೆಲ್ಲಾ ಏನು ಕಾರಣ? ಎಂದು ಆಕೆಯೇ ಪ್ರಶ್ನೆ ಹಾಕಿಕೊಂಡು ನಮ್ಮ ರಾಜಕಾರಣಿಗಳಿಗೆ ಪೊಲಿಟಿಕಲ್ ವಿಲ್ ಇದ್ದರೆ, ಅವರುಗಳು ನ್ಯಾಯನಿಷ್ಠರಾದರೆ, ಈ ಹಣವನ್ನೆಲ್ಲಾ ಮತ್ತೆ ಭಾರತಕ್ಕೆ ಹರಿದುಬರುವ ಹಾಗೆ ಮಾಡಬಹುದು ಎಂಬ ಪರಿಹಾರವನ್ನೂ ಸೂಚಿಸಿದರು.

"ಜಗ್ಗೋಜಿ'' ಓದಿನ ಬೆಳಕಿನಲ್ಲಿ ಯೋಚಿಸಿದಾಗ ಬೃಂದಾ ಸೂಚಿಸಿದ ಪರಿಹಾರ ಕಾರ್ಯಸಾಧುವಲ್ಲ ಎನ್ನಿಸುತ್ತದೆ ನನಗೆ. ಸ್ವಿಸ್ ಬ್ಯಾಂಕ್‌ಗಳಿಗೆ ಕಳ್ಳತನದಲ್ಲಿ ಹಣದ ಹೊಳೆ ಹರಿಸುತ್ತಿರುವುದಕ್ಕೆ ನಮ್ಮ ಜನನಾಯಕರ ಸೆನ್ಸ್ ಆಫ್ ಇನ್‌ಸೆಕ್ಯೂರಿಟಿ ಕಾರಣ ಅಂದಮೇಲೆ ಅವರಿಗೆ ತಕ್ಕ ಕೌನ್ಸೆಲಿಂಗ್ ಮಾಡಿ ಅವರಿಗೆಲ್ಲಾ ಧೈರ್ಯ ತುಂಬಿ ಅವರ ಇನ್‌ಸೆಕ್ಯೂರಿಟಿಯನ್ನು ಹೋಗಲಾಡಿಸಿದರೆ ಹಣ ತಾನಾಗಿಯೇ ದೇಶಕ್ಕೆ ಹಿಂತಿರುಗುವುದರಲ್ಲಿ ಕಿಂಚಿತ್ತೂ ಸಂಶಯವಿಲ್ಲ. ಇದಾದನಂತರ ಹಿಂತಿರುಗಿದ ಹಣದ ಹೊಳೆಯನ್ನು ಬಳಸಿ ದೇಶಾದ್ಯಂತ ಲಕ್ಷಾಂತರ ಶಾಲೆ, ಆಸ್ಪತ್ರೆಗಳನ್ನು ಬೇಕಾದಂತೆ ಕಟ್ಟಿಸಬಹುದು.

ತಕ್ಷಣ ಒಂದು ಆಳವಾದ ಹೆದರಿಕೆಯಿಂದ ಮೈ ಬೆವರಿತು. ಅಷ್ಟೊಂದು ಆಸ್ಪತ್ರೆ, ಶಾಲೆಗಳ ನಿರ್ಮಾಣ ಪ್ರಾರಂಭವಾದರೆ ಆ ಗುತ್ತಿಗೆಗಳಲ್ಲಿ ಏನಾದರೂ ಗೋಟಾಳ ಶುರುವಾದರೆ, ಲಕ್ಷ ಕೋಟಿಯ ಬದಲು ಕೋಟಿ ಕೋಟಿರೂಪಾಯಿಗಳು ಸ್ವಿಸ್ ಬ್ಯಾಂಕ್‌ಗಳಿಗೆ ಹರಿಯಲು ಶುರುವಾದರೆ..............

- ಶಿವಕುಮಾರ್

ಕೊರವಂಜಿ ಅಪರಂಜಿ ಟ್ರಸ್ಟ್
ಅರ್ಪಿಸುವ

****

ಡಾ॥ ಎಚ್.ಎನ್. ಸಂಸ್ಮರಣೆಯೊಂದಿಗೆ 16ನೇ

ಹಾಸ್ಯೋತ್ಸವ

****

ಶನಿವಾರ, ದಿನಾಂಕ 25.12.2010, ಎಚ್.ಎನ್. ಕಲಾಕ್ಷೇತ್ರ, ಜಯನಗರ, ಬೆಂಗಳೂರು

****

ಚಾಲನೆ ಕೊಡುವವರು	–	ಶ್ರೀಮತಿ ಬಿ. ಜಯಶ್ರೀ, ಹಿರಿಯ ರಂಗಕರ್ಮಿ
ಡಾ. ಎಚ್ಚೆನ್ ನೆನಪು	–	ಡಾ. ಎ.ಎಚ್. ರಾಮರಾವ್
ರಂಗ ಹಾಸ್ಯ	–	ಪ್ರೊ. ಲಕ್ಷ್ಮಿ ಚಂದ್ರಶೇಖರ್
ಹರಿಕಥೆಯಲ್ಲಿ ಸ್ವಾರಸ್ಯ	–	ಶ್ರೀಮತಿ ಶೋಭಾ ನಾಯ್ಡು
ಜಾನಪದ ಹಾಸ್ಯ	–	ಪ್ರೊ. ಎಂ. ಕೃಷ್ಣೇಗೌಡ
ಜಾನಪದ ಸೊಗಡು	–	ಪ್ರೊ. ಅಪ್ಪಗೆರೆ ತಿಮ್ಮರಾಜು
ಸಂಗೀತಗಾರ ಕೈಲಾಸಂ	–	ಶ್ರೀ ವೈ.ಎನ್. ಗುಂಡೂರಾವ್
ವಿಸ್ಮಯಗಾನ	–	ಶ್ರೀ ಬಾಬಿ

ಗೌರವಾರ್ಪಣೆ – ಹಿರಿಯ ಹಾಸ್ಯ ಪ್ರವರ್ತಕ, ಹಾಸ್ಯದ ಹರಿಕಾರ, ಹಾಸ್ಯಾಂದೋಲನವನ್ನು ಪ್ರಾರಂಭಿಸಿದ

ಶ್ರೀ ವೈ.ಎಂ.ಎನ್. ಮೂರ್ತಿ ಅವರಿಗೆ.

ಎಂ.ಆರ್. ಸುಬ್ಬರಾಮ್ ನೇತೃತ್ವದ ಗಾನವಿನೋದಿನಿ ತಂಡದಿಂದ
ಹಾಸ್ಯ ತುಣುಕುಗಳು, ಹಾಸ್ಯ ಗೀತೆಗಳು,
ಎಂದಿನಂತೆ ರಸಪ್ರಶ್ನೆ ಬಹುಮಾನ ಯೋಜನೆ

ಉಸ್ತುವಾರಿ : ಬೇಲೂರು ರಾಮಮೂರ್ತಿ – ವೈ.ವಿ. ಗುಂಡೂರಾವ್

ನಿಮಗೆಲ್ಲ ಆದರದ ಸ್ವಾಗತ

ಬೇಲೂರು ರಾಮಮೂರ್ತಿ – ಎ.ಆರ್. ರಾಜಗೋಪಾಲ್
ಸಂಚಾಲಕರು

ಹಾಸ್ಯೋತ್ಸವ ವಿಶೇಷ ಲೇಖನ

ಹೆಚ್ಚೇನು ಹೇಳೋಣ ಎಚ್ಚೆನ್ ಬಗ್ಗೆ?

- ನಾಗೇಶ ಹೆಗಡೆ

ಮೊದಲ ಬಾರಿಗೆ ಎಚ್. ನರಸಿಂಹಯ್ಯನವರನ್ನು ಭೇಟಿಯಾದ ಸಂದರ್ಭ. ಅವರು ಒಂದು ಮರದಡಿ ಕೂತಿದ್ದರು. ಅದು ಬೋಧಿವೃಕ್ಷವೂ ಆಗಿರಲಿಲ್ಲ, ಬೀದಿವೃಕ್ಷವೂ ಆಗಿರಲಿಲ್ಲ. ಭಾರತೀಯ ವಿಜ್ಞಾನ ಮಂದಿರದ ಆವರಣದಲ್ಲಿ ಹುಲ್ಲುಹಾಸಿನ ಮೇಲೆ 'ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್'ನ ಉದ್ಘಾಟನೆ ಕಾರ್ಯಕ್ರಮವಿತ್ತು. ಪ್ಲಾಸ್ಟಿಕ್ ಕುರ್ಚಿಯ ಮೇಲೆ ಇವರು ಕೂತಿದ್ದರು. ಮೂವತ್ತು ವರ್ಷಗಳ ಹಿಂದಿನ ಮಾತು ಇದು.

ದಿಲ್ಲಿಯಿಂದ ಬಂದು, ಅದೇ ತಾನೇ ಕನ್ನಡ ಪತ್ರಿಕೋದ್ಯಮದ ಮೊದಲ 'ವಿಜ್ಞಾನ ವರದಿಗಾರ' ಎಂಬ ತುಸು ಹಮ್ಮುಬಿಮ್ಮನ್ನು ತಲೆಯ ಮೇಲೆ ಹೊತ್ತುಕೊಂಡು ಅಲ್ಲಿಗೆ ಹೋಗಿದ್ದೆ ವರದಿ ಮಾಡಲೆಂದು. ನನ್ನ ದೃಷ್ಟಿ ಅಲ್ಲಿ ಎದುರಿಗೆ ಕೂತವರ ನಾಲ್ವರು ಹಿರಿಯರ ತಲೆ ಮೇಲೆಯೇ ಇತ್ತು. ಅದಕ್ಕೂ ಮೇಲೆ, ಆ ಜಕರಾಂಡಾ ವೃಕ್ಷದಲ್ಲಿ ಕೂತಿರಬಹುದಾದ ಪಕ್ಷಿಗಳ ಮೇಲೂ ಇತ್ತು. ಅವೇನಾದರೂ ಪಿಚ್‌ಕಿ ಹಾಕಿದರೆ, ಅದೇನಾದರೂ ಇವರ ತಲೆಯ ಮೇಲೆ ಬಿದ್ದರೆ...

ಬಚಾವಾಗುವವರು ಎಚ್ಚೆನ್ ಮಾತ್ರ!

ಸ್ವಾತಂತ್ರ್ಯ ಹೋರಾಟ ಗೆದ್ದು, ಎಲ್ಲರ ತಲೆಯ ಮೇಲಿನ ಹೊರೆಯೂ ಇಳಿದು ದಶಕಗಳೇ ಕಳೆದಿರುವಾಗ ಎಚ್ಚೆನ್ ಮಾತ್ರ ಯಾಕೆ ಸದಾಕಾಲ ಟೋಪಿ ಧರಿಸಿಯೇ ಓಡಾಡುತ್ತಾರೆ ಎಂಬುದಕ್ಕೆ ಅಂದು ನನಗೆ ಕಾರಣ ಸಿಕ್ಕಿತ್ತು. ಬೆಂಗಳೂರಿನಲ್ಲಿ ಅಷ್ಟೊಂದು ಮರಗಳಿದ್ದ ಕಾಲ ಅದಾಗಿತ್ತು. ಮರಗಳ ಮೇಲೆ ಅಸಂಖ್ಯ ಪಕ್ಷಿಗಳೂ ಇದ್ದ ಕಾಲ ಅದಾಗಿತ್ತು.

ಅಂದಿನ ಆ ಉದ್ಘಾಟನಾ ಸಮಾರಂಭ ಮುಗಿದ ಮೇಲೆ ಅಲ್ಲಿದ್ದ ಹಿರಿಯರಿಗೆ ನಾನೊಂದು ತರಲೆ ಪ್ರಶ್ನೆ ಹಾಕಿದ್ದೆ. ಅದಕ್ಕೆ ಎಚ್ಚೆನ್ ನೀಡಿದ ಜಾಣ ಉತ್ತರ ನನಗಿನ್ನೂ ನೆನಪಿದೆ.

ಪ್ರಶ್ನೆ ಏನಿತ್ತೆಂದರೆ, 'ವಿಜ್ಞಾನವನ್ನು ಜನಪ್ರಿಯ ಮಾಡಬೇಕು, ಅದು ಲ್ಯಾಬ್‌ಗಳಲ್ಲಿ ಬಂಧಿಯಾಗಿರಕೂಡದು, ಹೊಸ ಪೀಳಿಗೆಯನ್ನು ವಿಜ್ಞಾನದತ್ತ ಆಕರ್ಷಿಸಬೇಕು ಎಂದೆಲ್ಲ ಹೇಳುತ್ತಿದ್ದೀರಿ. ನೀವು ನೋಡಿದರೆ ನಾಲ್ವರೂ ನಿವೃತ್ತಿಯಾಗಿರುವಂತೆ ಕಾಣುತ್ತಿದ್ದೀರಿ; ನಾಲ್ವರ ಕಣ್ಣಿಗೂ ಚಾಳೀಸು ಇದೆ. ಯುವಪೀಳಿಗೆಯ ಒಬ್ಬ ವಿಜ್ಞಾನಿಯನ್ನಾದರೂ ನಿಮ್ಮ ತಂಡಕ್ಕೆ ಸೇರಿಸಬಹುದಿತ್ತಲ್ಲ; ನಾಯಕತ್ವವನ್ನು ಅವರೊಂದಿಗೆ ಹಂಚಿಕೊಳ್ಳಲು ಭಯವೆ ಅಥವಾ ಯಾರೂ ಸಿಗಲಿಲ್ಲವೆ?'

ವೇದಿಕೆಯಲ್ಲಿದ್ದ ನಾಲ್ವರೂ ಮುಖಮುಖ ನೋಡಿಕೊಂಡರು. ಅವರಲ್ಲಿ ಒಬ್ಬರು ಪ್ರೊ. ಜೆ.ಆರ್. ಲಕ್ಷ್ಮಣರಾವ್, ಇನ್ನೊಬ್ಬರು ಪ್ರೊ. ಸೇತೂರಾವ್, ಮತ್ತೊಬ್ಬರು ಪ್ರೊ. ಅಡ್ಯನಡ್ಕ ಕೃಷ್ಣಭಟ್ (ಇರಬೇಕು) ಕೊನೆಯವರು ಡಾ. ಎಚ್. ನರಸಿಂಹಯ್ಯ.

ದಿಢೀರ್ ಉತ್ತರ ತೋಚದೆಯೊ ಅಥವಾ ಯಾರು ಉತ್ತರಿಸಬೇಕೆಂಬ ಗೊಂದಲವೊ ಅಂತೂ ತುಸು ಕ್ಷಣದ ನಂತರ 'ನಾ ಹೇಳ್ತೀನ್ ಕೇಳಿ...' ಎನ್ನುತ್ತ ಎಚ್ಚೆನ್ ಅವರೆಲ್ಲರ

ವಕ್ತಾರರಾದರು. 'ನಾನು ಉತ್ತರ ಕೊಡೋಲ್ಲ, ಆದರೆ ನಿಮಗೇ ಪ್ರಶ್ನೆ ಕೇಳ್ತೀನಿ, ಒಂದ್ ಕಣ್ ಮೇಲೊ ಎರಡು ಕಣ್ಣೊ?' ಎಂದು ನನ್ನನ್ನೇ ಕೇಳಿದರು.

'ಎರಡು ಕಣ್ಣು' ಎಂದೆ ತಟಕ್ಕನೆ.

'ಎರಡು ಕಣ್ಣು ಮೇಲೋ, ನಾಲ್ಕು ಕಣ್ಣೊ?' ಎಚ್ಚೆನ್ ಮರುಪ್ರಶ್ನೆ.

ನಾನು ಎಲ್ಲೊ ಟ್ರ್ಯಾಪ್ ಆಗುತ್ತಿದ್ದೇನೆಂದು ಅನ್ನಿಸತೊಡಗಿ ಉತ್ತರಿಸಲು ಹಿಂಜರಿದಾಗ, ಮತ್ತೆ ಎಚ್ಚೆನ್,

'ನಾ ಹೇಳ್ತೀನ್ ಕೇಳಿ! ಎರಡು ಕಣ್ಣಿಗಿಂತ ನಾಲ್ಕು ಕಣ್ಣು ಮೇಲು ಹೌದೊ ಅಲ್ಲವೊ? ಮ್ಯಾಥ್ಸ್ ಪ್ರಕಾರಾನೂ ಹೌದು, ಲಾಜಿಕ್ ಪ್ರಕಾರಾನೂ ಹೌದು ತಾನೆ? ನಾವು ನಾಲ್ಕು ನಾಲ್ಕು ಕಣ್ಣು ಇದ್ದವರೇ ಈ ಸಂಘಟನೆ ಆರಂಭಿಸೋಕೆ ಮುಂದಾಗಿದೇವೆ...' ಎಂದು ನಗುವಿನ ಅಲೆಯ ಮಧ್ಯೆ ಇನ್ನೇನೇನೊ ಕಾರಣ ಕೊಡುತ್ತ ಹೋದರು.



ಸೌಜನ್ಯ : ಕರ್ನಾಟಕ ಫೋಟೊ ನ್ಯೂಸ್

'ತಮಾಷೆಗೆ ಹೇಳ್ದೆ ಅಷ್ಟೆ' ಎಂದು ಕೊನೆಗೆ 'ನಿಮ್ಮ ಒಬ್ಸರ್ವೇಶನ್ ಚೆನ್ನಾಗಿದೆ, ಮುಂದಿನ ಬಾರಿ ಹೊಸ ಪದಾಧಿಕಾರಿಗಳ ಆಯ್ಕೆ ಮಾಡುವಾಗ ಕನ್ನಡಕದ ಮೇಲೆ ಕಣ್ಣಿಟ್ಟಿರ್ತೀವಿ' ಎಂದೇನೋ ಹೇಳಿದರು.

ಅಂದಿನಿಂದ ಪ್ರತಿ ಬಾರಿ ನಮ್ಮಿಬ್ಬರ ಭೇಟಿ ಆದಾಗಲೂ ಎಚ್ಚೆನ್ ಕನ್ನಡಕದ ಪ್ರಸ್ತಾಪ ತೆಗೆದು ಏನೋ ಒಂದು ಜೋಕ್ ಹಾರಿಸುತ್ತಿದ್ದರು. ಲಾಲ್‌ಬಾಗ್‌ನಲ್ಲಿ ಎಂದೋ ಒಮ್ಮೆ ನಸುಕಿನಲ್ಲಿ ವಾಕ್ ಹೋಗಿದ್ದೆ. ಅಲ್ಲೊಬ್ಬ ಲುಂಗಿಧಾರಿ ಹಿರಿಯರು ತಲೆ ತಗ್ಗಿಸಿ, ಕೈಯಲ್ಲಿ ಮೊಂಡು ಕೋಲು ಹಿಡಿದು ಸರಸರ ನಡೆಯುವುದನ್ನು ನೋಡಿ ಜತೆಗಿದ್ದ ನನ್ನ ಪತ್ನಿ 'ಅವರು ಎಚ್ಚೆನ್ ಅಲ್ವಾ?' ಅಂದಳು. ಟೋಪಿನೂ ಇಲ್ಲ, ಕನ್ನಡಕನೂ ಇಲ್ಲ! ಹೌದೊ ಅಲ್ಲವೊ ಅನುಮಾನಿಸುತ್ತ ಸಮೀಪ ಹೋಗಿ ನೋಡಿದರೆ ಹೌದು ಎಚ್ಚೆನ್ ! 'ನಮಸ್ಕಾರ ಸಾರ್, ಗುರ್ತೇ ಸಿಗಲಿಲ್ಲ ನಿಮ್ಮದು' ಎಂದೆ. ಅವರೂ ಪ್ರತಿ ನಮಸ್ಕಾರ ಮಾಡಿ, 'ಈಗ ಗೊತ್ತಾಯ್ತಾ? ನೀವೇ ಕನ್ನಡಕ ಹಾಕ್ಕೊ ಬೇಕು, ನನ್ ಗುರ್ತು ಹಿಡಿಯೋಕೆ' ಎಂದರು.

ಕಾಲಗತಿ ಕಳೆದಂತೆ ನನಗೂ ಕನ್ನಡಕ ಬಂತು ಅನ್ನಿ. ಮತ್ತೊಮ್ಮೆ ಹೀಗೇ ಲಾಲ್‌ಬಾಗ್‌ನಲ್ಲಿ ಚುಮುಚುಮು ಚಳಿಯಲ್ಲಿ ವಾಕ್ ಮಾಡುತ್ತಿದ್ದೆ. ತಲೆ-ಕಿವಿ ಮುಚ್ಚುವ ಮಫ್ಲರ್‌ನಂತೆ ಖಾದಿ ಟವೆಲ್ ಸುತ್ತಿಕೊಂಡು ಎಚ್ಚೆನ್ ಎಂದಿನಂತೆ ಮೊಂಡು ಕೋಲು (ಅದು ಊರುಗೋಲಲ್ಲ, ನಾಯಿ ಓಡಿಸುವ ದಂಡಾಯುಧ) ಹಿಡಿದು ವಾಕ್ ಮಾಡುತ್ತಿದ್ದರು. 'ಏನ್ ಸಾರ್, ಇವೊತ್ತು ಮಾತ್ರ ಕನ್ನಡಕ ಹಾಕ್ಕೊಂಡ್ ನೋಡಿದರೂ ನಿಮ್ಮ ಗುರ್ತು ಸಿಗೋದು ಕಷ್ಟ. ಅದ್ಯಾಕೆ ಇಂಥಾ ಚಳಿಯಲ್ಲೂ ಬಂದಿದೀರಿ ಸರ್' ಎಂದೆ. 'ಇಲ್ಲ, ಮೂರು ದಿನ ಊರಲ್ಲಿರಲಿಲ್ಲ, ಇವೊತ್ತೂ

ಬರದೇ ಇದ್ರೆ, ಮುದ್ಕ ಗೊಟಕ್ ಆಗಿರಬೇಕು ಅಂತ ಈ ಕೋತಿಗಳು ತಪ್ಪಾಗಿ ತಿಳ್ಕೊಬಿಟ್ರೆ ಅಂತ... ಹಾಜರಿ ಹಾಕಿ ಹೋಗೋಕೆ ಬಂದಿದೀನಿ ಅಷ್ಟೆ ಎಂದಿದ್ದರು.

1999ರ ರಾತ್ರಿ ಇಡೀ ಬೆಂಗಳೂರೇ ಮಿಲೆನಿಯಂ ಹುಚ್ಚು ಸಂಭ್ರಮದಲ್ಲಿ ಸಮುದ್ರ ಉಕ್ಕೇರಿದಂತೆ ಮಹಾತ್ಮಾ ಗಾಂಧಿ ರಸ್ತೆ, ಬ್ರಿಗೇಡ್ ರಸ್ತೆಯತ್ತ ಬಂದು ಜಮಾಯಿಸುತ್ತಿತ್ತು. ದೇಶದ ಯಾವ ಯಾವ ಗಣ್ಯರು, ಸಿನೆಮಾ ತಾರೆಯರು ಮಿಲೆನಿಯಂ ಸ್ವಾಗತಕ್ಕೆಂದು ಯಾವ ಯಾವ ಬೀಚ್‌ಗಳಲ್ಲಿ, ಯಾವ ಯಾವ ಹೋಟೆಲ್‌ಗಳಲ್ಲಿ ಸೇರಲಿದ್ದರು, ಅವರಿಗಾಗಿ ಎಂತೆಂಥ ಅದ್ದೂರಿ ಸಿದ್ಧತೆಗಳು ನಡೆದಿದ್ದವು ಎಂಬುದರ ಸಮೀಕ್ಷೆಯನ್ನು 'ಪ್ರಜಾವಾಣಿ'ಯ ಟೆಲಿಪ್ರಿಂಟರ್‌ನಲ್ಲಿ ನೋಡಿಕೊಂಡು ನಾನೂ ರಸ್ತೆಗೆ ಇಳಿದೆ. ಜನಜಂಗುಳಿಯನ್ನು, ಪೊಲೀಸರ ಕಿಕ್ಕಿರಿದ ಬಂದೋಬಸ್ತುಗಳನ್ನು ದಾಟಿಕೊಂಡು ಗಾಂಧೀನಗರದ ಖಾಸಗಿ ಬಸ್ ನಿಲ್ದಾಣಕ್ಕೆ ಬಂದೆ. ನ್ಯಾಶನಲ್ ಹೈಸ್ಕೂಲ್‌ನಲ್ಲಿ ಓದುತ್ತಿದ್ದ ನನ್ನ ಮಗ ತನ್ನ ನಾಲ್ವರು ಟೀಮ್‌ಮೇಟ್‌ಗಳ ಜತೆ ಬಾಗಲಕೋಟೆಯಲ್ಲಿ ನಡೆಯಲಿರುವ ಮಕ್ಕಳ ವಿಜ್ಞಾನ ಪ್ರದರ್ಶನಕ್ಕೆಂದು ಅಂದು ರಾತ್ರಿ ಬಸ್‌ನಲ್ಲಿ ಹೊರಡುವವನಿದ್ದ. ಅವರಿಗೆ ವಿದಾಯ ಹೇಳಲೆಂದು ಹೋದರೆ ಅಲ್ಲಿನ ಬಿಕೋ ಎನ್ನುವ ಬೀದಿಯಲ್ಲಿ ಒರಟು ಹಾಸುಗಲ್ಲಿನ ಫುಟ್‌ಪಾತ್‌ನಲ್ಲಿ ಅರೆಗತ್ತಲಲ್ಲಿ ಎಂಭತ್ತರ ವಯೋವೃದ್ಧ ಮಾಜಿ ಕುಲಪತಿ, ಪದ್ಮಭೂಷಣ ಡಾ. ಎಚ್. ನರಸಿಂಹಯ್ಯ ಮೆಲ್ಲಗೆ; ಒಬ್ಬಂಟಿಯಾಗಿ ಹೆಜ್ಜೆ ಹಾಕುತ್ತಿದ್ದರು. ಟೋಪಿ ಇತ್ತು. ಕನ್ನಡಕ ಇರಲಿಲ್ಲ.

ಸಾಲಾಗಿ ನಿಂತ ಬಸ್‌ಗಳಲ್ಲಿ ಒಂದೊಂದರ ಬಳಿಗೂ ಹೋಗಿ ಕತ್ತೆತ್ತಿ, ಕಣ್ಣು ಕಿರಿದುಗೊಳಿಸಿ ಬೋರ್ಡ್ ನೋಡುತ್ತಿದ್ದರು.

'ಎಲ್ಲಿಗೆ ಹೊರಟಿರಿ ಸಾರ್?' ಎಂದು ಕೇಳಿದೆ.

'ಎಲ್ಲಿಗೂ ಇಲ್ಲಪ್ಪ. ಈ ಮಕ್ಕಳು ಸೈನ್ಸ್ ಎಕ್ಸಿಬಿಷನ್‌ಗೆ ಹೋಗ್ತಿದಾರೆ. ಅವರಿಗೆ ವಿಷ್ ಮಾಡಿ ಹೋಗೋಣಾಂತ ಬಂದೆ' ಎಂದರು.

ತನ್ನ ಸ್ವಂತದ್ದೆಂಬ ಮಕ್ಕಳಿಲ್ಲ, ಮೊಮ್ಮಕ್ಕಳಿಲ್ಲ. ದೇಶದ ಅಕ್ಷರಶಃ ಕೋಟ್ಯಂತರ ಪ್ರಜೆಗಳು ತಮ್ಮ ಮಕ್ಕಳೊಂದಿಗೆ ಮಿಲೆನಿಯಂನ ಭ್ರಾಮಕ ಸಂಭ್ರಮದಲ್ಲಿ ಮುಳುಗಿ ಪಟಾಕಿ ಹಾರಿಸುತ್ತಲೊ, ಟಿವಿಯಲ್ಲಿನ ವಿಶೇಷ ಕಾರ್ಯಕ್ರಮಗಳನ್ನು ನೋಡುತ್ತ ಕೇಕೆ ಹಾಕುತ್ತಲೊ ಕೂತಿರುವ ಆ ಸಂದರ್ಭದಲ್ಲಿ ಇವರು ಮಾತ್ರ ತಮ್ಮ ಸಂಸ್ಥೆಯ ಮಕ್ಕಳು ವಿಜ್ಞಾನ ಸ್ಪರ್ಧೆಯಲ್ಲಿ ಬಹುಮಾನ ಗೆದ್ದು ಬರಬೇಕು, ದೇಶದ ನಾಳಿನ ಭವಿಷ್ಯದ ಮಾದರಿ ನಾಗರಿಕರಾಗುವ ನಿಟ್ಟಿನಲ್ಲಿ ಅವರನ್ನು ಪ್ರೋತ್ಸಾಹಿಸಬೇಕು ಎಂಬ ಒಂದೇ ಹಂಬಲದಿಂದ ಆ ಚಳಿಯಲ್ಲಿ ಮಫ್ಲರ್ ಕೂಡ ಇಲ್ಲದೆ ಒಂಟಿಯಾಗಿ ಹೆಜ್ಜೆ ಹಾಕುತ್ತಿದ್ದರು.

ಮಕ್ಕಳೆಲ್ಲ ಏರಿಕೂತ ಬಸ್ಸನ್ನು ತಾವೂ ಕಷ್ಟಪಟ್ಟು ಏರಿ, ಅಲ್ಲಿದ್ದ ಐವರಿಗೂ 'ಹೋಗಿ ಬರ್‍ರಿಪಾ, ಪ್ರೈಜ್ ಗೆದ್ ಬನ್ನಿ... ನಿಮ್ಮ ಪ್ರಯೋಗವನ್ನಷ್ಟೇ ಪ್ರದರ್ಶನ ಮಾಡ್ತಾ ಕೂತಿರಬೇಡಿ. ಪಾಳಿಯ ಮೇಲೆ ಬೇರೆಯವರದ್ದನ್ನೂ ನೋಡಿ ಬರಬೇಕು... ಹೋಗಿ ಬನ್ನಿ, ಆಲ್ ದಿ ಬೆಸ್ಟ್ ಆಗಲಿ !' ಎಂದು ಹಾರೈಸಿ ಕೆಳಗಿಳಿದರು.

ಅಂದು ನನ್ನ ಕನ್ನಡಕದ ಕಣ್ಣುಗಳು ಒದ್ದೆಯಾಗಿದ್ದವು.

ಇಪ್ಪತ್ತು ವರ್ಷಗಳ ಹಿಂದೆ ಮೊದಲ ಬಾರಿಗೆ ಅವರನ್ನು ಭೇಟಿ ಮಾಡಿದಾಗ, 'ನೀವು ಕನ್ನಡಕಧಾರಿ ವೃದ್ಧರು ಏನು ಮಾಡಬಲ್ಲಿರಿ?' ಎಂಬರ್ಥದಲ್ಲಿ ಅವರಿಗೆ ತರಲೆ ಪ್ರಶ್ನೆಯನ್ನು ಕೇಳಿದ್ದಕ್ಕೆ ಈಗ ಮೊದಲ ಬಾರಿಗೆ ನನಗೇ ನಾಚಿಕೆ ಎನಿಸಿತ್ತು. ❋

ಕನ್ನಡಾಯಣ

- ಮುಳಿಯ ಸರಸ್ವತಿ

Cultಉ ಕಾವ್ಯದ ಮಸಿಯ ಕುಡಿಕೆಯ
Tiltಉ ಮಾಡುವ ಮೊದಲು ಹಾವಿನ
Beltಉ ಹಾಕಿದ ಗಣಪತಿಯ ನೆನೆವುದು dutyಯೆಮ್ಮವರ
Faultಉ ಮೀರಿದರಿದನು severe
Joltಉ ತಪ್ಪದು ಸತ್ಯ thunder
Boltಉ therefore ಗಜಮುಖನ ನೆನೆವೆ.

ಈ ಮೇಲಿನ (ಜಿ.ಪಿ. ರಾಜರತ್ನಂ ವಿರಚಿತ) ಗಣೇಶಸ್ತುತಿಯೊಡನೆ ನನ್ನ ಕನ್ನಡಾಯಣವನ್ನು ಪ್ರಾರಂಭಿಸುತ್ತಿದ್ದೇನೆ.

ಅದಾಗಿ ಇದೇನು ರಾಮಾಯಣ ಪ್ರಾರಂಭಿಸಿದಳಪಾ ಅಂತ ಹುಬ್ಬ ಏರಿಸಬ್ಯಾಡ್ರಿ ಮತ್ತ. ನಮ್ಮ ಕನ್ನಡದ ಪುರಾಣ ರಾಮಾಯಣಕ್ಕಿಂತಲೂ ಬಾಳ ದೊಡ್ಡದದ ಬಿಡ್ರಿ. ಅಂದ್ಹಂಗ ಇದು ಧಾರವಾಡ ಕನ್ನಡಂತ ನಿಮಗ ಅನ್ನಿಸಿದ್ರ ಖರೇನ ಅದ ಬಿಡ್ರಿ. ಇದು ಧಾರವಾಡ ಕನ್ನಡದ ಒಂದು ಸಣ್ಣ ಸ್ಯಾಂಪಲ್ ಅಷ್ಟೆ. ಮೈಸೂರು ಕನ್ನಡದಲ್ಲಿ ಹೇಳಬೇಕೆಂದರೆ ನಿಮ್ಮ guess ಕರೆಕ್ಟಾಗಿದೆ. ಇದು ತುಂಬಾ ಸಿಂಪಲ್ ಕನ್ನಡ. ಮಂಗಳೂರು ಕನ್ನಡವಂತೂ ನಮ್ಮ ಅಚ್ಚಕನ್ನಡವಲ್ಲವೋ? ಹೀಗೆ ನಮ್ಮ ರಾಜ್ಯದಲ್ಲಿ ಹಲವು ಹದಿನಾರು ಥರದ ಕನ್ನಡ ಭಾಷೆಗಳಲ್ಲಿ ನಾವು ಮಾತಾಡುತ್ತೇವೆ. ಹಾಗಾಗಿ ರಾಜ್ಯದ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಬಂದಾಗ ಭಾಷೆಯಿಂದಾಗಿ ಆಗುವ ತೊಂದರೆಗಳು, ಫಜೀತಿಗಳು ಅನೇಕ.

ಇನ್ನು ಉತ್ತರ ಕರ್ನಾಟಕದಿಂದ ನಮ್ಮ ರಾಜಧಾನಿ ಕಡೆಗೆ ಬಂದವರ ಪಾಡು ನೋಡಿ. ತಮ್ಮ ಕೈಯಲ್ಲಿದ್ದ ವಿಳಾಸ ಹಿಡಿದು ಯಾರನ್ನು ಕೇಳಿದರೂ - ''ಇಲ್ಲಿ ಕೊಡಿ, ಯಾವ area? ನೀವು ಜಯನಗರ address ಹಿಡಿದುಕೊಂಡು R.T.Nagaraಕ್ಕೆ ಬಂದಿದ್ದೀರಲ್ಲ, ನೀವು ಒಂದು ಮಾಡಿ. ಯಾವುದಾದರೂ auto ತಕ್ಕೊಂಡು Bull Temple Roadಗಾಗಿ ಗಾಂಧಿ ಬಜಾರಿಗೆ ಹೋಗಿ. ಅಲ್ಲಿಂದ leftಗೆ ತಿರುಗಿ K.R. Roadಗೆ ಬಂದು South End Circle ಸೇರಿ straight ಹೋದರೆ ಸೀದಾ ಜಯನಗರ fourth block ಸಿಗುತ್ತೆ. ಮತ್ತೆ ಇದರಲ್ಲಿ cross, main ಎಲ್ಲಾ ಇದೆಯಲ್ಲ, ಯಾರನ್ನು ಕೇಳಿದ್ರೂ ಹೇಳ್ತಾರೆ. ತುಂಬಾ easy'' ಎನ್ನುತ್ತಾರೆ. ಬಸವನ ಗುಡಿ ರಸ್ತೆ ಗೊತ್ತಿದ್ದ ಇವರಿಗೆ ಬುಲ್ ಟೆಂಪಲ್ ರೋಡ್ ಅಂದರೆ ಎಲ್ಲಿದೆಯೋ, ಎಷ್ಟು ದೂರವೋ ಎಂಬ ಚಿಂತೆ ಆಯಿತು. 'ಕ್ರಮೇಣ ಅವರಿಗೂ ಗೊತ್ತಾಗುತ್ತದೆ ಬಿಡಿ' ಅನ್ನುತ್ತೀರಾ?

ಬೆಂಗಳೂರಿನ ಮಹಾತ್ಮಗಾಂಧಿ ರಸ್ತೆ ಈಗ M.G. Road ಆಗಿಲ್ಲವೇ? ಬಸವನ ಗುಡಿ Bull Temple ಅಷ್ಟೆ. K.R. Circle ಅಂದರೆ ಕೃಷ್ಣರಾಜ ವೃತ್ತ. ಹೀಗೆ ಸಾಗುತ್ತದೆ.

ಮೈಸೂರಿನಲ್ಲಿರುವ ನಮ್ಮ ಮನೆಗೆ ಬಂದ ನೆಂಟರೊಬ್ಬರು ಬೆಳಗಿನ ಪತ್ರಿಕೆ ಓದುತ್ತ 'ಲಾರಿ ಹರಿದು ಇಬ್ಬರ ಮರಣ, ನಾಲ್ಕು ಜನರಿಗೆ ಗಾಯ' ಎಂದು ಬರೆದದ್ದನ್ನು ಓದಿ. "ಅಲ್ಲ, ಲಾರಿ 'ಹರಿದು ಹೋಗುವುದು' ಎಂದಂ ಏನು? ಹಾವು, ಹುಳು, ಹುಪ್ಪಡಿ, ನೀರು ಎಲ್ಲ ಹರಿಯುತ್ತದೆ. ಏನಿದರ ಅರ್ಥ?" ಎಂದು ತಲೆ ಕೆರೆದುಕೊಂಡರು. ಮೈಸೂರಿನ ಹಳೆ ಹುಲಿಗಳಾದ ನಾವು ತಿಳಿಸಿದ ಮೇಲೆ ಸರಿಯಾದರು ಬಿಡಿ.

ನನ್ನ ಮಂಗಳೂರು ಭಾವ ಒಂದು ತಮಾಷೆ ಕತೆ ಹೇಳುತ್ತಿದ್ದರು. ಒಮ್ಮೆ ಒಬ್ಬ ರೈಲ್ವೆಯ ಹಿರಿಯ ಅಧಿಕಾರಿ ಹಾಸನ, ಅರಸಿಕೆರೆಗಳ ಮೂಲಕ ಹಾದು ಹೋಗುವ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದರಂತೆ. ಹಾಸನ ನಿಲ್ದಾಣಕ್ಕೆ ರೈಲು ಬರುತ್ತಿದ್ದಂತೆ ಅಲ್ಲಿನ ಸಿಬ್ಬಂದಿಯೊಬ್ಬ ಎತ್ತರದ ಧ್ವನಿಯಲ್ಲಿ 'ಆಸನ, ಆಸನ' ಎಂದು ಕೂಗುತ್ತಿದ್ದ. ಮುಂದೆ ರೈಲು ಅರಸೀಕೆರೆ ತಲುಪಿದಾಗ ಅಲ್ಲಿಯೂ ಒಬ್ಬ ರೈಲ್ವೇ ನೌಕರ 'ಹರ್ಸೀಕೆರೆ, ಹರ್ಸೀಕೆರೆ' ಎಂದು ಕೂಗಿ ಹೇಳುತ್ತಿದ್ದುದನ್ನು ಕೇಳಿ, ಅವರ ಉಚ್ಚಾರಣೆಗೆ ತಕ್ಕಂತೆ ಇಬ್ಬರನ್ನೂ ಪರಸ್ಪರ ವರ್ಗಾವಣೆ ಮಾಡುವಂತೆ ಆದೇಶ ನೀಡಿದರಂತೆ. ಅದಾದ ಸ್ವಲ್ಪ ದಿನಗಳ ಅನಂತರ ಆ ಅಧಿಕಾರಿ ಇನ್ನೊಮ್ಮೆ ಅದೇ ಮಾರ್ಗವಾಗಿ ರೈಲಿನಲ್ಲಿ ಹೋಗುತ್ತಿದ್ದಾಗ ಸ್ಥಿತಿ ಬದಲಾಗದಿದ್ದುದನ್ನು ನೋಡಿ ಅವರಿಗೆ ಅಚ್ಚರಿಯಾಯಿತು. ಅರಸೀಕೆರೆ ನಿಲ್ದಾಣದಲ್ಲಿ ಆ ನೌಕರನನ್ನು ಕರೆದು "ಏನಯ್ಯಾ, ನಿನ್ನನ್ನು ಹಾಸನಕ್ಕೆ ಟ್ರಾನ್ಸ್‌ಫರ್ ಮಾಡುವಂತೆ ಆದೇಶ ನೀಡಿದ್ದೆ, ನೀನು ಇನ್ನೂ ಇಲ್ಲಿಯೇ ಇದ್ದೀಯಲ್ಲ, ಏನು ಕತೆ?" ಎಂದು ಗದರಿಸಿದರಂತೆ. ಅದಕ್ಕವನು ಕೊಟ್ಟ ಉತ್ತರ : "ಔದ್ಬುದ್ಧಿ, ನಾನು ಆಸ್ನದಾಗೇ ಇದ್ದೆ. ಒತ್ತಿಂಗ್ಳು ಹರ್ಸೀಕೆರೆಗೆ ಬಂದೆ." ಇದನ್ನು ಕೇಳಿದ ರೈಲ್ವೇ ಅಧಿಕಾರಿ ಸುಸ್ತೋ ಸುಸ್ತು!

ನಮ್ಮ ಕನ್ನಡದ ಪುರಾಣ ರಾಮಾಯಣಕ್ಕಿಂತಲೂ ಬಾಳ ದೊಡ್ಡದದ ಬಿಡ್ರಿ

ಈ ರೀತಿಯ ತಪ್ಪು ಉಚ್ಚಾರಣೆಯಿಂದಾಗುವ ಆಭಾಸವೂ ಹಲವು ಹನ್ನೆರಡು. ಕೆಲವರು 'ನ' ಕಾರದ ಬದಲು 'ಣ' ಕಾರವನ್ನು ಉಪಯೋಗಿಸುವುದುಂಟು. ಹೀಗೆ ಕನ್ನಡದ 'ಕನಕಲಕ್ಷ್ಮಿ' 'ಕಣಕಲಕ್ಷ್ಮಿ' ಆಗುತ್ತಾಳೆ. 'ಹಬ್ಬ' 'ಅಬ್ಬ' ಆದರೆ, 'ಅಕ್ಕಿ' 'ಹಕ್ಕಿ' ಯಾಗುತ್ತದೆ. ಚುನಾವಣೆಯ ಸಮಯ 'ಹಸ್ತ' 'ಅಸ್ತ' ವಾಗುವುದು ಇದ್ದೇ ಇದೆ. ಇಂತಹ ಪ್ರಯೋಗಗಳೇ ಸರ್ವಸಾಮಾನ್ಯವಾಗಿ ಹೋಗಿ ಕೆಲವೊಮ್ಮೆ ಅಪಭ್ರಂಶಗಳೇ ಸರಿ ಏನೋ ಎಂಬ ಸಂಶಯ ಬರಲು ಪ್ರಾರಂಭವಾಗುತ್ತದೆ.

ನಾವು ಕನ್ನಡಿಗರು, ಪರಭಾಷಾ ಸಹಿಷ್ಣುಗಳು. ಆದ್ದರಿಂದಲೇ ನಮ್ಮ ರಾಜಧಾನಿ ಬೆಂಗಳೂರಿನಲ್ಲಿ ಕನ್ನಡವನ್ನಲ್ಲದೆ ಬೇರೆ ಎಲ್ಲಾ ಭಾಷೆಗಳನ್ನು ಕೇಳಬಹುದು. ಬೆಂಗಳೂರಿನ ಮಲ್ಲೇಶ್ವರಂನಲ್ಲಿ ಒಂದು ತರಕಾರಿ ಅಂಗಡಿಗೆ ಹೋಗಿದ್ದಾಗ ನನಗೆ ಇದು ಬೆಂಗಳೂರೋ

ಅಲ್ಲ, ಚೆನ್ನೈಗೇ ಬಂದು ಬಿಟ್ಟಿದ್ದೇನೋ ಎಂಬ ಭ್ರಮೆ ಉಂಟಾಯಿತು. ಯಾಕೆಂದರೆ ಅಲ್ಲಿ ಎಲ್ಲ ವ್ಯಾಪಾರಿಗಳೂ ಸಾರೋದ್ಧಾರ ತಮಿಳಿನಲ್ಲಿಯೇ ವ್ಯವಹರಿಸುತ್ತಿದ್ದರು!

ಇತ್ತೀಚೆಗಂತೂ ಕನ್ನಡ ಮಾತಾಡುವಾಗ ಇಂಗ್ಲೀಷ್ ಪದಗಳನ್ನು ಬಳಸುವುದು ಸಾಮಾನ್ಯ ಸಂಗತಿಯಾಗಿದೆ. ಶಾಲೆಯ ಮೆಟ್ಟಿಲನ್ನೇ ಹತ್ತದವರೂ ಇಂಗ್ಲೀಷ್ ಪದಗಳನ್ನು ತಪ್ಪಾಗಿಯೋ, ಒಪ್ಪಾಗಿಯೋ ಕನ್ನಡದೊಡನೆ ಬೆರೆಸಿ ಮಾತಾಡುವುದನ್ನು ನಿತ್ಯ ನೋಡುತ್ತಿರುತ್ತೇವೆ. ದೂರದ ಮಾತೇಕೆ. ನಮ್ಮ ಮನೆಗೆಲಸದವಳನ್ನೇ ತೆಗೆದುಕೊಳ್ಳಿ. ಅವಳು ನಿರಕ್ಷರಕುಕ್ಷಿ, ಕನ್ನಡದ ಅಕ್ಷರ ಜ್ಞಾನವೂ ಇಲ್ಲದವಳು. ಇಂಗ್ಲೀಷ್ ಅಂತೂ ಇನ್ನೂ ದೂರ. ಆದರೆ ಕೆಲವು ಪದಗಳನ್ನು ಅಚ್ಚಗನ್ನಡದಲ್ಲಿ ಹೇಳಿದರೆ ಅವಳಿಗೆ ಅರ್ಥವೇ ಆಗುವುದಿಲ್ಲ. ''ಶಾಂತಾ, ನಲ್ಲಿಯ ನೀರು ಸುರಿಯಲು ಬಿಡಬೇಡ. ನೀರಿನ ಕೆಲಸವಾಗಿದ್ದರೆ ನಲ್ಲಿ ನಿಲ್ಲಿಸು'' ಎಂದರೆ ''ಏನು, ಯಾಕೆ'' ಎಂದು ವಿವರಣೆ ಕೇಳಿ ''ಓಹೋ ನೀರು ವೇಸ್ಟ್ ಮಾಡ್ಬೇಡಾಂತೀರಾ, ನೋಡಿ ಟ್ಯಾಪ್ ಕ್ಲೋಸ್ ಮಾಡಿವ್ನಿ ಸರೀನಾ?'' ಅಂತಾಳೆ. ಹೀಗೆ ದೈನದಿಂದ ಎಷ್ಟೋ ಮಾತುಗಳನ್ನು ಅವಳಿಗೆ ಇಂಗ್ಲೀಷ್‌ನಲ್ಲೇ ಹೇಳಬೇಕಾಗಿದೆ!

ಒಮ್ಮೆ ಯಾವುದೋ ಒಂದು ಉಪಾಹಾರಮಂದಿರಕ್ಕೆ ಹೋಗಿದ್ದೆವು. ಮಾಣಿಗೆ ಸಕ್ಕರೆ ಹಾಕದ ಚಹಾ ಬೇಕು ಎಂದರೆ sugarlessಸ್ಸಾ ಎಂದು ವಿವರಣೆ ಕೇಳಿದ. ನಮ್ಮವರು ಒಮ್ಮೆ ಸಾದಾ ದೋಸೆ ಬೇಕು ಎಂದು ಹೇಳಿದಾಗ ಇನ್ನೊಬ್ಬ ಮಾಣಿ 'ಸಾರ್ ಸಾದಾ ದೋಸೆ ಇಲ್ಲ' ಅಂದ. ''ಅಲ್ಲಯ್ಯಾ, ಮಸಾಲೆ ದೋಸೆ ಇದೆ ಅಂತ ಹೇಳ್ತೀಯಾ, ಪಲ್ಯ ಹಾಕದೆ ದೋಸೆ ತಂದು ಕೊಡ ಬಹುದಲ್ಲಾ'' ಅಂದರೆ, ''ಓ, plain ದೋಸೇನಾ'' ಎಂದ. ಅಂತೂ ಅವನಿಗೆ ಜ್ಞಾನೋದಯವಾಯಿತು! ಈಗಂತೂ ಅವಿದ್ಯಾವಂತರಿಗೂ ಕನ್ನಡಕ್ಕಿಂತಲೂ ಇಂಗ್ಲೀಷ್ ಪದಗಳ ಮೇಲೆ ಹೆಚ್ಚಿನ ಪ್ರೀತಿ ಇರುವ ಹಾಗೆ ತೋರುತ್ತದೆ.

ನಮ್ಮ ಮಕ್ಕಳು, ಮೊಮ್ಮಕ್ಕಳು ಕನ್ನಡದಲ್ಲಿ ಸುಂದರವಾಗಿ, ಮುದ್ದಾಗಿ 'ಅಪ್ಪ', 'ಅಮ್ಮ' ಎಂದರೆ ತಂದೆತಾಯಿಯರಿಗೆ ಅಷ್ಟೇನೂ ಸಂತಸ ಆದದ್ದು ಕಾಣೆ. ಅದೇ ಡ್ಯಾಡಿ, ಮಮ್ಮಿ ಎಂದರೆ ಖುಷಿಯೋ ಖುಷಿ. 'ಅತ್ತಿಗೆ', 'ಭಾವ', 'ಅತ್ತೆ', 'ಮಾವ' ಮೊದಲಾದ ಸಂಬಂಧಸೂಚಕ ಪದಗಳ ಬದಲು 'ಕಸಿನ್', 'ಅಂಕಲ್', 'ಆಂಟಿ'ಗೆ ನಾವು ಹೆಚ್ಚಿನವರು ಅಂಟಿಕೊಂಡಿದ್ದೇವೆ. ನಮಗೆ ಅತ್ತೆಯೂ 'ಆಂಟಿ', ಚಿಕ್ಕಮ್ಮ ದೊಡ್ಡಮ್ಮಂದಿರೂ 'ಆಂಟಿ'ಗಳೇ. ಹಾಲು, ಪತ್ರಿಕೆಗಳನ್ನು ತರುವ ಹುಡುಗರೂ ಮನೆಯೊಡತಿಯನ್ನು (ಯಾವ ವಯಸ್ಸಿನವರೇ ಆಗಲಿ) 'ಆಂಟಿ' ಎಂದೇ ಸಂಬೋಧಿಸುವುದು ಸರ್ವಸಾಮಾನ್ಯ. ಆದರೆ ಅದನ್ನೆ ನಮ್ಮ ಕಸ್ತೂರಿ ಕನ್ನಡದಲ್ಲಿ ಅಕ್ಕ, ಚಿಕ್ಕಮ್ಮ ದೊಡ್ಡಮ್ಮ ಅತ್ತೆ, ಮಾವ ಎಂದರೆ ಎಷ್ಟು ಆಪ್ಯಾಯಮಾನವಾಗಿರುತ್ತದೆ ಅಲ್ಲವೇ? ನಾವೆಲ್ಲಾ ಚಿಕ್ಕವರಾಗಿದ್ದಾಗ ಅಕ್ಕಪಕ್ಕದ ಮನೆಯ ಹೆಂಗಸರನ್ನು - ವಯಸ್ಸಾದವರಾಗಿದ್ದರೆ - ಮಾಮಿ, ಅತ್ತೆ ಎಂದೂ, ಸಣ್ಣ ವಯಸ್ಸಿನವರನ್ನು ಅಕ್ಕ, ಅತ್ತಿಗೆ ಎಂದೂ, ಗಂಡಸರನ್ನು ಮಾಮ, ಚಿಕ್ಕಪ್ಪ ಅಣ್ಣ ಎಂದೂ ಕರೆಯುತ್ತಿದ್ದುದು ವಾಡಿಕೆ. ಈಗ ಎಲ್ಲರೂ ಒಂದೋ 'ಆಂಟಿ'ಗಳು, ಇಲ್ಲವಾದರೆ 'ಅಂಕಲ್'ಗಳು!

ಇದಕ್ಕೆಲ್ಲಾ ಕಾರಣ ಈಗಿನ ಕಲಿಕೆ. ಸರಕಾರಿ ಶಾಲೆಗಳನ್ನು ಬಿಟ್ಟರೆ ಹೆಚ್ಚಿನ ಎಲ್ಲಾ ಖಾಸಗಿ ಶಾಲೆಗಳು ಇಂಗ್ಲೀಷನ್ನೇ ಮಾಧ್ಯಮವಾಗಿ ಬಳಸುತ್ತಿವೆ. ಹಾಗಾಗಿ ಈಗಿನ ಪೀಳಿಗೆಗೆ ಕನ್ನಡಕ್ಕಿಂತ ಇಂಗ್ಲೀಷ್‌ನ ಮೇಲೆಯೇ ಹೆಚ್ಚಿನ ವ್ಯಾಮೋಹ. ಇದಕ್ಕೆ ಅಪವಾದಗಳು ಇಲ್ಲದಿಲ್ಲ. ಒಮ್ಮೆ ಏನಾಯ್ತೂಂತ ನೋಡಿ. ಮೂಡಬಿದರೆಯಿಂದ ನನ್ನ ತಂಗಿ ತನ್ನ ಪುಟ್ಟ ಮಗಳೊಡನೆ ನಮ್ಮಲ್ಲಿಗೆ ಬಂದಿದ್ದಳು. ಆ ಮಗಳು ಮೂರನೇ ತರಗತಿಯಲ್ಲಿ ಕನ್ನಡ ಮಾಧ್ಯಮದಲ್ಲಿ ಓದುತ್ತಿದ್ದಳು. (ಈಗ ಅದೇ ಹುಡುಗಿ ಒಬ್ಬ ದಕ್ಷ ವೈದ್ಯಳಾಗಿದ್ದಾಳೆ ಬಿಡಿ!). ಒಂದು ದಿನ ನನ್ನ ಹತ್ತಿರ ಬಂದು "ದೊಡ್ಡಮ್ಮ ನಾಡಿದ್ದು ಊರಿಗೆ ಹೋದಮೇಲೆ ನನಗೆ ಪರೀಕ್ಷೆ ಇದೆ. ಸ್ವಲ್ಪ ಉಕ್ತಲೇಖನ ಅಭ್ಯಾಸ ಮಾಡಿಸ್ತೀರಾ? ಎಂದು ಕೇಳಿದಾಗ ನನಗೆ ತಬ್ಬಿಬ್ಬು, ನಾನು ಆಗಷ್ಟೇ 20 ವರ್ಷ ಉತ್ತರ ಭಾರತದಲ್ಲಿ ಕಳೆದು ನಮ್ಮೂರಿಗೆ ಮರಳಿದವಳು. 'ಉಕ್ತಲೇಖನ' ಪದದ ಅರ್ಥ ನನಗೆ ಥಕ್ಕನೆ ಹೊಳೆಯಲಿಲ್ಲ. ಆದರೂ ಬಿಟ್ಟು ಕೊಡದೆ "ಆಗಲಿ ಅದಕ್ಕೇನಂತೆ" ಎಂದು ನಾನು ಅವಳ ಪುಸ್ತಕ ತೆಗೆದಾಗ "ಕಷ್ಟವಾದ ಶಬ್ದಗಳನ್ನು ಕೊಡಿ" ಎಂದಳು. ಆಗ ನನ್ನ ತಲೆಯಲ್ಲಿ ಮಿಂಚಿನಂತೆ ಹೊಳೆಯಿತು ಈ 'ಉಕ್ತಲೇಖನ' ಎಂದರೆ 'ಡಿಕ್ಟೇಶನ್' ಇರಬೇಕು ಎಂದು." ಅಂತೂ ನನ್ನ ಊಹೆ ಸರಿಯಾಗಿ ನಾನು ಸಂದಿಗ್ಧ ಪರಿಸ್ಥಿತಿಯೊಂದರಿಂದ ಪಾರಾದೆ.

❋



ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

- ದಂಡಾ

- ಡಿ ಎಂ ಕೆ ಎಂದರೆ ದೆಹಲಿ ಮನಿ ಫಾರ್ ಕರುಣಾನಿಧಿ ಎಂದು ಈ ಅಂಕಣದಲ್ಲಿ ಪ್ರಕಟವಾಗಿದ್ದು ನೆನಪಿದೆಯೆ? ಆ ಮನಿ ರಾಜ ಮಾರ್ಗದಲ್ಲೇ ಹೋಗಿದೆ ಎಂದು ಈಗ ಸಾಬೀತಾಗಿದೆ.
- ಭಾಗ್ಯಲಕ್ಷ್ಮಿ ಯೋಜನೆಯಿಂದ ಹೆಣ್ಣು ಮಕ್ಕಳಿಗೆ ಮಾತ್ರ ಪ್ರಯೋಜನವಾಗಿದೆ ಎಂದೇನಿಲ್ಲ, ಗಂಡು ಮಕ್ಕಳಿಗೂ ಆಗಿದೆ. ಉದಾಹರಣೆಗೆ, ಯಡ್ಯೂರಪ್ಪನವರ ಪುತ್ರರು...
- ಆಕಳಿಕೆ - ಪ್ರಾಮಾಣಿಕ ಅಭಿಪ್ರಾಯವನ್ನು ಬಹಿರಂಗವಾಗಿ ವ್ಯಕ್ತಪಡಿಸುವ ವಿಧಾನ.
- If you were another person, would you like to be a friend of yours?
- ಟೀನ ತೀರ್ಥದ ತರಹ ಕೊಟ್ಟರೆ ಟೀರ್ಥ ಎಂದು ಕರೆಯಬಹುದು

ಮೆಲುಕು ಹಾಕುವಂತಹ ಮಾತುಗಳ ಗುಚ್ಛ

- ರಹಸ್ಯ - ಒಬ್ಬರಿಗೆ ಒಮ್ಮೆಲೆ ಮಾತ್ರ ಹೇಳುವ ವಿಷಯ.
- Ecstasy - A feeling when you feel you are going to feel a feeling you have never felt before.
- ಹೆಚ್ಚು ತುಪ್ಪಳ ಕೊಡುವ ಕುರಿಯನ್ನು ನಾವು ಹೆಚ್ಚು ಗೌರವದಿಂದ ಕಾಣುತ್ತೇವೆಯೆ? ಇಲ್ಲ, ಅದೂ ಒಂದು ಕುರಿ ಅಷ್ಟೆ.
- ಬದುಕು ಎಂದರೆ ಕೆಲವೊಮ್ಮೆ ಪಾರಿವಾಳವಾಗಿರುವುದು; ಕೆಲವೊಮ್ಮೆ ಪ್ರತಿಮೆಯಾಗಿರುವುದು.
- You are beautiful when you don't need a mirror to tell you.
- ಬದುಕು ಹಿತ್ತಲಿನಿಂದ ಆರಂಭಗೊಂಡು, ಅಂಗಳದ ತನಕ ಕರೆತಂದು, ಕೊನೆಗೆ ಜಗುಲಿಯ ಮೇಲೆ ಉದ್ದೋ ಉದ್ದಕ್ಕೆ ಮಲಗಿಸಿಬಿಡುತ್ತದೆ.
- ಸಿಂಹಕ್ಕೆ ಗುದ್ದಿದೆ, ಚಿರತೆಯ ಕಾಲು ಮುರಿದೆ, ಆನೆಯ ಸೊಂಡಿಲನ್ನು ತಿರುಚಿದೆ... ಆಗ ಗೊಂಬೆ ಅಂಗಡಿಯ ಮಾಲೀಕ ನನ್ನನ್ನು ಒದ್ದು ಹೊರಗೆ ಹಾಕಿದ.
- ಯಡಿಯೂರಪ್ಪನವರು ಯಾಕೆ ಯಾವಾಗಲೂ ಹಣೆಗೆ ಕುಂಕುಮ ಇಟ್ಟುಕೊಂಡು ಓಡಾಡ್ತಾರೆ? ಅಧಿಕಾರದ ಮುತ್ತೈದೆತನ ಶಾಶ್ವತವಾಗಿರಲಿ ಎಂದಿರಬಹುದು.
- ಅಂಗಡಿಯವನೊಬ್ಬನ ಧ್ಯೇಯ ವಾಕ್ಯ: In god we trust, rest is all cash.
- Sometimes what King Khan Rajani Kant!
- ಪಿಕ್ಚರ್ ಹೇಗಿದೆ ಎಂದರೆ 'ಏನೋ ಒಂಥರಾ' ಅಂದ್ರೆ?

❋

ಮೌಸ್ ಟ್ರ್ಯಾಪ್

- ಇಸ್ಮಾಯಿಲ್

ಅದ್ಯಾವುದೊ ರೋಗಕ್ಕೆ ಬೀಗದ ಕೈ ಕೊಡ್ತಾರೆ ಅಂತ ಎಲ್ಲರಿಗೂ ಗೊತ್ತು ಆದರೆ 'ಬೀಗದ ಕೈ' ರೋಗವೆಂಬುದೊಂದು ಇದೆ ಅಂತ ಬಹಳ ಜನಕ್ಕೆ ಗೊತ್ತಿಲ್ಲ. ಇದು ಬ್ಯಾಂಕಿನ ಕೆಲವು ಅಧಿಕಾರಿಗಳಿಗೆ ಅವರಿಗೆ ಸಿಗುವ ಭಡ್ತಿ ಜೊತೆ ಬರುವ ಬಳುವಳಿ. ಅವರಂತಹ ಕೀ ವ್ಯಕ್ತಿಗಳ ಪುರಾಣ ಬಹಳ ಕುತೂಹಲಕಾರಿ. ಕೈಗೆ 'ಕೀ' ಜವಾಬ್ದಾರಿ ಬಂದರೆ ಎಲ್ಲಾ ಸ್ವಾತಂತ್ರ್ಯಗಳನ್ನು ಕಳೆದುಕೊಳ್ಳಬೇಕಾಗುತ್ತೆ. ಮಾನವ ಸಹಜವಾದ, ಆಜನ್ಮ ಹಕ್ಕಾದ 'ಮರೆವು' ಅವನಿಗೆ ಅತ್ಯಂತ ದುಬಾರಿಯಾಗುತ್ತದೆ. ಅದಕ್ಕೆ ಬೆಲೆ ತೆತ್ತಬೇಕಾಗುತ್ತೆ. ರಜವಿದ್ದಾಗ ಪರ ಊರಿಗೆ ಹೋಗಿ ನೇರವಾಗಿ ಊರಿಗೆ ಬಂದು ಬ್ಯಾಂಕಿಗೆ ಹೋಗುವಂತಿಲ್ಲ. ಬಸ್ ಅಥವಾ ರೈಲು ಲೇಟಾದರೆ ಗತಿಯೇನು ಎಂಬ ಚಿಂತೆಯಿಂದ ಹಿಂದಿನ ದಿನವೇ ಹಿಂತಿರುಗಬೇಕು. ಪರ ಊರಿಗೆ ಬ್ಯಾಂಕಿನ ಬೀಗದ ಕೈ ತೆಗೆದುಕೊಂಡು ಹೋಗುವಂತಿಲ್ಲ. ಬ್ಯಾಂಕಿನ ಕಟ್ಟಡದ ಬೀಗದ ಕೈಗಿಂತ ಕ್ಯಾಷ್ ಸೇಫ್ ಕೀ ಜವಾಬ್ದಾರಿ ಇದ್ದರೆ ಯಾವಾಗಲು ಅದರ ಮೇಲೇ ಗಮನ. ಒಮ್ಮೆ ನಮ್ಮ ಮ್ಯಾನೇಜರ್ ಒಬ್ಬರು ಬ್ಯಾಂಕಿಗೆ ಬರುತ್ತಿದ್ದ ಹಾಗೆ ಅವರ ಪತ್ನಿ ಅವರನ್ನು ಆಟೋದಲ್ಲಿ ಹಿಂಬಾಲಿಸಿ ಬಂದು ಅದೇನೊ ಕೊಟ್ಟು ತಕ್ಷಣ ಹೊರಟುಹೋದರು ಎಂಬ ಸುದ್ದಿ ಜವಾನನಿಂದ ಎಲ್ಲಾ ಸಿಬ್ಬಂದಿಗೂ ಹರಡಿತು. ಮ್ಯಾನೇಜರ್ ಬ್ಯಾಂಕಿನ ಬೀಗದ ಕೈಗೊಂಚಲು ಮರೆತುಬಂದಿದ್ದು ಅವರ ಪತ್ನಿ ಆಟೋದಲ್ಲಿ ಹಿಂಬಾಲಿಸಿ ತಂದುಕೊಟ್ಟಿದ್ದರು. (ಮೊಬೈಲ್ ಇಲ್ಲದ ಕಾಲವದು) ಕೀ ಕಳೆದು ಹೋದರೆ, ಬೇರೆ ಶಾಖೆಯಲ್ಲಿಟ್ಟ ಡೂಪ್ಲಿಕೇಟ್ ಕೀ ಇಂದ ಬ್ಯಾಂಕಿನ ಕ್ಯಾಷ್‌ನನ್ನು ನೆರವೇರಿಸಬಹುದು. ತಕ್ಷಣ ಬೇರೆ ಬೀಗದ ಕೀ ಮಾಡಿಸಬಹುದು. ಆದರೆ ಅದರ ಖರ್ಚನೆಲ್ಲಾ ಕೀ ಕಳೆದುಕೊಂಡವರ ತಲೆಗೆ ಕಟ್ಟುವುದಲ್ಲದೆ, ಬೇಜಾವಾಬ್ದಾರಿಗಾಗಿ ಒಂದು ಮೆಮೊ ಕೊಡುತ್ತಾರೆ. ಈ ಕಾರಣಕ್ಕಾಗಿಯೇ ಅನೇಕರು ಪ್ರಮೋಶನ್ ತಿರಸ್ಕರಿಸುತ್ತಾರೆ. ಇನ್ನು ಕೆಲವರು ಹೆಚ್ಚು ಹೆಚ್ಚು ಪ್ರಮೋಶನ್ ತೆಗೆದುಕೊಂಡು 'ಬೀಗದ ಕೈ' ಜವಾಬ್ದಾರಿ ತಪ್ಪಿಸಿಕೊಂಡರೆ ಇನ್ನೂ ಕೆಲವರು ಆಡಳಿತ ಕಛೇರಿಗೆ, ಆಡಿಟ್ ವಿಭಾಗಕ್ಕೆ ಅಥವಾ ತರಬೇತಿ ಕೇಂದ್ರಗಳಿಗೆ ಹೋಗಲು ಹೆಚ್ಚು ಶ್ರಮವಹಿಸುತ್ತಾರೆ.

> **ಬ್ಯಾಂಕಿನವರ ಮನೆ ಇದೇನಾ? ಅಂತ ಸರಿರಾತ್ರೀಲಿ ಪೊಲೀಸಿನವರು ಕೇಳಿಕೊಂಡು ಬಂದಾಗ....**

ಬೆಂಗಳೂರಿನ ಸಮೀಪದ ಸಣ್ಣ ಊರಿನಿಂದ ಬೆಂಗಳೂರಿನ ಪ್ರತಿಷ್ಠಿತ ಶಾಖೆಯೊಂದಕ್ಕೆ ವರ್ಗವಾದಾಗ ನಾನು ಪ್ರತಿನಿತ್ಯ 30 ಕಿ.ಮೀ. ದೂರದಿಂದ ಪ್ರಯಾಣಿಸುತ್ತಿದ್ದೆ. ಬೆಂಗಳೂರಿನಲ್ಲಿ ಮನೆ ಮಾಡಿರಲಿಲ್ಲ. ನನ್ನ ಸಹಾಯಕ ಅಧಿಕಾರಿ ಜೊತೆ ಸ್ವಲ್ಪದಿನ 'ಕೀ'

ಇಟ್ಟುಕೊಳ್ಳುವ ಖಾಸಗಿ ಒಪ್ಪಂದ ಮಾಡಿಕೊಂಡೆ. ಅವರೇ ಬ್ಯಾಂಕ್ ಶಾಖೆಯ ಹತ್ತಿರವೇ ಮನೆಮಾಡಿದ್ದ ಗೋವಿಂದರಾವ್. ನನಗೆ ಮನೆ ಸಿಗುವ ತನಕ ಈ ಏರ್ಪಾಡು, ಗುಟ್ಟಿನ ಏರ್ಪಾಡು. ನೆಮ್ಮದಿಯಿಂದ ಸ್ವಲ್ಪ ದಿನ ಇದ್ದೆ.

ಇದ್ದಕ್ಕಿದ್ದ ಹಾಗೆ ಒಂದು ಭಾನುವಾರ ಬೆಳಗ್ಗೆ ಗೋವಿಂದರಾವ್ ಪತ್ನಿ ಸಮೇತರಾಗಿ ನಮ್ಮ ಮನೆಗೆ ಬಂದಾಗ ಗಾಬರಿ ತಂದಿತು. ಒಳಗೆ ಕರೆದೆ. ಏನೊ ಎಮರ್ಜನ್ಸಿ ಇರಬೇಕು, ರಜಬೇಕೆಂದು ಕಾಣುತ್ತೆ, ಕೀ ಕೊಡೊದಕ್ಕೆ ಬಂದಿದ್ದಾರೆ ಅನ್ನಿಸಿತು. ಆದರೆ ಪತ್ನಿ ಜೊತೆ ಏಕೆ? ಗೋವಿಂದರಾವ್ ಪತ್ನಿ ಏನೊ ಹೇಳಲು ತವಕಿಸಿರುವಂತೆ ಇತ್ತು. ನನ್ನ ಹೆಂಡತಿಯನ್ನು "ನೋಡೇ ಯಾರು ಬಂದಿದ್ದಾರೆ" ಎಂದು ಕರೆದೆ. ಅವಳು ಬರುತ್ತಿದ್ದಂತೆ ಗೋವಿಂದರಾವ್ ಪತ್ನಿ "ನೀವೇನೊ ಆರಾಮವಾಗಿ ಇದ್ದು ಬಿಡುತ್ತೀರಿ, ಅಲ್ಲಿ ನಾವು...." ಎಂದು ಪ್ರಾರಂಭಿಸಿದರು. ಅಷ್ಟರಲ್ಲಿ ಗೋವಿಂದರಾವ್ ತಮ್ಮ ಪತ್ನಿಯನ್ನು ಕಣ್ಣಿನಿಂದಲೇ ಗದರಿಸಿದರು. "ಏನಾಯಿತು?" ಎಂದು ನಾನು ಕೇಳಬೇಕಾಯಿತು.

"ಸಾರ್ ನಿನ್ನೆ ರಾತ್ರಿ ಸುಮಾರು ಒಂದೂವರೆ ಇರಬಹುದು, ಪೊಲೀಸಿನವರು ನಮ್ಮ ಮನೆ ಮುಂದೆ ನಿಂತು '..ಬ್ಯಾಂಕಿನವರ ಮನೆ ಇದೇನಾ?' ಎಂದು ಕೇಳ್ತಾ ಇದ್ದರು. ನಮ್ಮ ಮನೆ ಓನರ್ 'ಹೌದು' ಎಂದು ಹೇಳಿದ್ದು ಕೇಳಿಸಿತು. ಮಹಡಿ ಹತ್ತಿ ಮೇಲೆ ಬಂದರು. ನನ್ನವರಿಗೆ ಮೊದಲೇ ಎಲ್ಲಕ್ಕೂ ಗಾಬರಿ, ಬಿ.ಪಿ., ಡಯಾಬಿಟಿಸ್ ಬೇರೆ. ಬಾಗಿಲು ತೆರೆಯಲು ಬಿಡಲಿಲ್ಲ, ಕಿಟಕಿಯಲ್ಲೇ ಮಾತನಾಡಿಸಿ ಎಂಬ ತಾಕೀತು. "ರೀ ಬ್ಯಾಂಕಿನಲ್ಲಿ ಅಲಾರಾಂ ಹೊಡೀತಾ ಇದೆ, ಬೀಗದ ಕೈ ತೆಗೆದುಕೊಂಡು ನಮ್ಮ ಜೊತೆ ಬನ್ನಿ" ಎಂದು ಪೊಲೀಸನವರು. ಹೇಗೆ ನಂಬುವುದು? ಸೀರಿಯಲ್ ಹಾಗೂ ಸಿನಿಮಾಗಳಲ್ಲಿ ಕಳ್ಳರೇ ಪೊಲೀಸ್ ವೇಷದಲ್ಲಿ ಬರುವುದನ್ನು ನೋಡಿರುವ ನಮಗೆ ಸಹಜ ಹೆದರಿಕೆ. ಆದರೆ ಸದ್ಯ ನಮ್ಮ ಶಾಖೆಯ ಕಟ್ಟಡದ ಓನರ್ ಜೊತೆ ಕಾಣಿಸಿಕೊಂಡಿದ್ದು ಧೈರ್ಯ ಬಂತು. ಅವರ ಜೊತೆ ಹೊರಟೆ.

ಬ್ಯಾಂಕಿನ ಹತ್ತಿರ ಹೋದಂತೆ ಅಲಾರಾಂ ಶಬ್ದ ಸರಿರಾತ್ರೀಲಿ ಜೋರಾಗಿ ಕೇಳಿಸುತ್ತಿತ್ತು. ಬೀದಿಯ ಜನವೆಲ್ಲಾ ಸೇರಿಬಿಟ್ಟಿದ್ದಾರೆ. ನಿದ್ದೆಗೆಟ್ಟ ಕಣ್ಣುಗಳು ನನ್ನನ್ನೇ ಕೆಕ್ಕರಿಸಿ ನೋಡುತ್ತಿದ್ದವು. ಪೊಲೀಸಿನವರ ಜೊತೆಗಿದ್ದ ಧೈರ್ಯದಲ್ಲಿ ಬೀಗ ತೆಗೆದು ಒಳಗೆ ಹೋದೆವು. ಹೋದ ತಕ್ಷಣ ಮಾಡಿದ ಕೆಲಸ ಅಲಾರಾಂ ಸ್ವಿಚ್ ಆಫ್ ಮಾಡಿದ್ದು. ನಂತರ ನೋಡಿದ್ದು ಕ್ಯಾಷ್ ಸೇಫ್ - ಅದು ಭದ್ರವಾಗಿತ್ತು. ಬ್ಯಾಂಕಿನೊಳಗೆ ಯಾವ ಅವ್ಯವಸ್ಥೆಯೂ ಇರಲಿಲ್ಲ. ಅಲಾರಾಂ ಯಾವ ಸಂದರ್ಭದಲ್ಲಿ ಹೊಡೆಯುತ್ತದೆ ಎಂದು ಪೊಲೀಸರು ಕೇಳಿದಾಗ ಅದರ ವ್ಯವಸ್ಥೆಯನ್ನು ವಿವರಿಸಿದೆ. ಬ್ಯಾಂಕಿನ ಮ್ಯಾನೆಜರ್ ಕ್ಯಾಬಿನ್‌ನಲ್ಲಿ, ಕ್ಯಾಷಿಯರ್ ಬಳಿ, ಮತ್ತೆ ಆ ವಿಭಾಗದ ಅಧಿಕಾರಿ ಕಾಲಿನ ಕೆಳಗೆ ತುರ್ತು ಸಂದರ್ಭದಲ್ಲಿ ಬೇರೆ ಯಾರಿಗೂ ಗೊತ್ತಾಗದಂತೆ, ಕಾಲಿನಿಂದ ಒತ್ತ ಬಹುದಾದ ಬಟನ್‌ಗಳನ್ನು ತೋರಿಸಿದೆ. ಹಾಗೆ ಮಾಡುತ್ತಿರುವಾಗ ಇಲಿಯೊಂದು ಸರಕ್ಕನೆ ಹಾಯ್ದು



ಹೋಯಿತು. ತಕ್ಷಣ ಇನ್ಸ್‌ಪೆಕ್ಟರ್‌ಗೆ ಜ್ಞಾನೋದಯವಾಯಿತು. 'ಸಾರ್, ಇದರ ಕೆಲಸವಿರಬಹುದಲ್ಲವೆ?' ಎಂದು ಕೇಳಿದರು. ಇರಬಹುದೆಂದು ಹೇಳಿ ನಿಟ್ಟುಸಿರುಬಿಟ್ಟೆ..'' ಎಂದು ಗೋವಿಂದರಾವ್ ಇಲಿ ಪುರಾಣಕ್ಕೆ ಮಂಗಳ ಹಾಡಿದರು.

''ಸಾರಿ, ಗೋವಿಂದರಾವ್, ನನ್ನಿಂದಾಗಿ ನಿಮಗೆ ನಿಮ್ಮ ಪತ್ನಿಗೆ ಹಾಗೂ ಬ್ಯಾಂಕಿನ ಸುತ್ತಲೂ ಇರುವವರಿಗೆ ತೊಂದರೆಯಾಗಿದೆ, ಕ್ಷಮಿಸಿ, ಇನ್ಮೇಲೆ ನಾನೇ ಕೀ ಇಟ್ಟುಕೊಳ್ತೀನಿ, ಕೊಟ್ಟುಬಿಡಿ'' ಎಂದೆ.

''ನಾನು ಬಂದಿರೋದು ವಿಷಯ ತಿಳಿಸಲು, ಕೀ ಕೊಡಕ್ಕಲ್ಲ ಸಾರ್, ಇದಕ್ಕಿಂತ ಮುಖ್ಯ ವಿಷಯ ಹೇಳೋದಿಕ್ಕೆ ಬಂದಿರೋದು ನಾವು. ನಮ್ಮ ಪಕ್ಕದ ಮನೆ ಖಾಲಿ ಆಗಿದೆ ಸಾರ್, ಅದೇ ನಮ್ಮ ಗ್ರಾಹಕ ಸುಬ್ಬರಾಯರ ಮನೆ, ಅವರು ನಿಮಗೆ ಮನೆ ಕೊಡಲು ಒಪ್ಪಿದ್ದಾರೆ. ನೀವು ನೋಡಿದ್ದೀರಿ, ನಿಮ್ಮಾಕೆಗೆ ಇವತ್ತು ಭಾನುವಾರ ತೋರಿಸಬಹುದು'' ಎಂದರು ಗೋವಿಂದರಾಯರು.

''ಸರಿ ಅರ್ಥವಾಯ್ತು ಬಿಡಿ, ನಿನ್ನೆ ಅಲಾರಾಂ ಪ್ರಕರಣವಾದ ಮೇಲೆ ನಿಮಗೆಲ್ಲಿ ನಿದ್ದೆ ಬರುತ್ತೆ? ಆಗಲಿ ಶಿಫ್ಟ್ ಮಾಡೋಣವಂತೆ. ನನ್ನ ಹೆಂಡ್ತಿ ನೋಡಿ ಒಪ್ಪೋದು ಬೇಡ. ನನ್ನ ಒಪ್ಪಿಗೆಗೆ ಅವಳ ಬೆಂಬಲ ಯಾವಾಗಲೂ ಇರುತ್ತೆ. ಆದರೆ ನಾನು ಬ್ಯಾಂಕಿನ ಹತ್ತಿರ ಮನೆ ಮಾಡಿದರೂ ರಾತ್ರಿ ಹೊತ್ತು ಅಲಾರಾಂ ಹೊಡೆದು, ಪೊಲೀಸನವರು ಬಂದರೆ ನಾನು ಬ್ಯಾಂಕಿಗೆ ಹೋಗುವಾಗ ನಿಮ್ಮನ್ನೂ ಎಬ್ಬಿಸೇ ಕರೆದುಕೊಂಡು ಹೋಗೋದು ಗೊತ್ತೆ?'' ಎಂದಾಗ ಗೋವಿಂದರಾವ್, ಅವನ ಹೆಂಡತಿ ನನ್ನ ಹೆಂಡ್ತಿ ಜೊತೆ ಸೇರಿ ನಕ್ಕರು.

ಅಂತು ಇಲಿಯನ್ನು ಟ್ರಾಪ್ ಮಾಡಲು ನಾವು ಎಷ್ಟು ಸರ್ಕಸ್ ಮಾಡ್ತೀವಿ. ಆದರೆ ಅದು ನಮ್ಮನ್ನು ಮತ್ತು ಪೊಲೀಸನವರನ್ನು ಎಷ್ಟು ಸುಲಭವಾಗಿ ಟ್ರ್ಯಾಪ್ ಮಾಡುತ್ತೆ ಅಂತ ಅನ್ನಿಸೋಲ್ವೆ?

❋

ಗೊತ್ತಾಗುತ್ತೆ...

ಯುಕೆಜಿ ತರಗತಿಯಲ್ಲಿ ಡ್ರಾಯಿಂಗ್ ಪಾಠ ನಡೆದಿತ್ತು. ಟೀಚರ್ ಒಂದು ಸುತ್ತು ಹಾಕುತ್ತಾ ಮಕ್ಕಳು ಏನು ಬರೆಯುತ್ತಿದ್ದಾರೆ ಎಂಬುದನ್ನು ಗಮನಿಸುತ್ತಿದ್ದರು.

ಒಂದು ಮಗು ತೀರಾ ಗಂಭೀರವಾಗಿ ಡ್ರಾಯಿಂಗ್ ಮಾಡುತ್ತಿತ್ತು.

"ಏನು ಬರೀತಿದ್ದೀ ಮಗು?" ಎಂದು ಟೀಚರ್ ಕೇಳಿದರು.

"ದೇವರ ಚಿತ್ರ" ಎಂದಿತು ಮಗು.

"ಆದರೆ ದೇವರು ಹೇಗಿದ್ದಾನೆ ಎಂಬುದು ಯಾರಿಗೂ ಗೊತ್ತಿಲ್ಲವಲ್ಲ?" ಎಂದು ಟೀಚರ್ ಕೇಳಿದರು.

"ಇನ್ನೊಂದು ನಿಮಿಷದಲ್ಲಿ ಗೊತ್ತಾಗುತ್ತೆ ಮಿಸ್" ಎಂದಿತು ಮಗು ತಲೆ ಎತ್ತದೆ.

ನಮ್ಮಲ್ಲೇನೋ ಒಂದು ಗೌಣ...

- ಎಚ್. ಗೋಪಾಲಕೃಷ್ಣ

ಜೀವನದಲ್ಲಿ ಶಿಸ್ತನ್ನು ರೂಢಿಸಿಕೊಳ್ಳುವುದನ್ನು ಕುರಿತು ಹಲವಾರು ಜ್ಞಾನಿಗಳು ತಮ್ಮದೇ ಆದ ವಿಚಾರ ಧಾರೆಗಳನ್ನು ಆಗಾಗ ಹೇಳುತ್ತಲೇ ಬಂದಿದ್ದಾರೆ. ಈಗಾಗಲೇ ನಾವು ಶಿಸ್ತಿನಿಂದಲೇ ಜೀವನ ಸಾಗಿಸುತ್ತಿದ್ದೇವೆ. ಹೊಸದಾಗಿ ಕಲಿಯಲು ಅದೇನಿದೆ ಎಂದು ಸುಮಾರು ಜನ ಭಾವಿಸುವುದೂ ಉಂಟು. ಆದರೆ ಒಂದೇ ಒಂದು ಕ್ಷಣ ನಾವು ಕೂತು ಯೋಚಿಸಿದರೆ ನಮ್ಮಲ್ಲೇನೋ ಒಂದು ರೀತಿಯ ಗೌಣವಿರುವುದು ನಮ್ಮ ಅರಿವಿಗೆ ಬಾರದೇ ಇರುವುದಿಲ್ಲ. ಇದನ್ನು ಕುರಿತು ಒಂದು ಸಂಗತಿಯನ್ನು ತಮಗೆ ಹೇಳಲೇ ಬೇಕು. ನನ್ನ ಬಂಧುವೊಬ್ಬರ ಪುತ್ರ ಪ್ರತಿದಿವಸವೂ ತುಂಬಾ ತಡವಾಗಿ ರಾತ್ರಿ ಮನೆ ಸೇರುತ್ತಾನೆ. ತುಂಬಾ ತಡವಾಗಿ ಮಲಗುವುದರಿಂದ ಬೆಳಿಗ್ಗೆ ತಡವಾಗಿಯೇ ಏಳುತ್ತಾನೆ. ಈ ಕಾರಣದಿಂದ ಅವನಿಗೆ ಯಾವ ಕೆಲಸ ಮಾಡಲೂ ಬಿಡುವೇ ಸಿಗುವುದಿಲ್ಲ. ಅದರಿಂದ ಅವನ ಎಲ್ಲಾ ಕೆಲಸ ಕಾರ್ಯಗಳೂ ನಿಧಾನ. ಈ ನಿಧಾನದಿಂದ ಅವನಿಗೆ ನ್ಯಾಯವಾಗಿ ಸಲ್ಲಬೇಕಿರುವ ಅವಕಾಶಗಳಿಂದ ವಂಚಿತನಾಗುತ್ತಿದ್ದಾನೆ, ಸಮಾಜದಲ್ಲಿ ಅವನ ವಿದ್ಯೆಗೆ, ಅವನ ಯೋಗ್ಯತೆಗೆ ಸಿಕ್ಕಬೇಕಾಗಿರುವ ಸೌಲಭ್ಯಗಳು ಅವನಿಗೆ ದೊರಕಿಲ್ಲ ಎಂಬುವುದು ಅವರ ದೊಡ್ಡ ಚಿಂತೆಯಾಗಿತ್ತು. ಸಮಾಜ ಅವನಿಗೆ ಮೋಸಮಾಡಿದೆ ಎಂದು ಅವರು ತಮ್ಮ ಅಸಂತೋಷವನ್ನು ಹೇಳುತ್ತಿದ್ದರು. ಹೇಗಾದರೂ ಮಾಡಿ ಅವನಿಗೆ ಬೇಗ ಏಳುವ ಅಭ್ಯಾಸ ಮಾಡಿಸಬೇಕು ಎಂದು ಚಿಂತಿಸುತ್ತಿದ್ದರು. ಮನೆ ವೈದ್ಯರ ಬಳಿ ತಮ್ಮ ಕಷ್ಟ ಹೇಳಿಕೊಂಡರು. ಹುಡುಗನ ಸಂಗಡ ಸಮಾಲೋಚಿಸಿದ ವೈದ್ಯರು ಆತನಿಗೆ ಜಿಮ್ನೇಷಿಯಂ ಮಾಡುವುದು ಇಷ್ಟ ಎಂದು ತಿಳಿದುಕೊಂಡರು. ಆ ದಿಕ್ಕಿನಲ್ಲಿಯೇ ತಮ್ಮ ಚಿಕಿತ್ಸೆ ಆರಂಭಿಸಿದರು.

ಸಮಸ್ಯೆ ಎಷ್ಟು ಸುಲಭವಾಗಿ ಪರಿಹಾರ ಕಂಡಿತು ಎಂದರೆ ಅವರ ಮಗನಿಗೆ ಬೆಳಿಗ್ಗೆ ಐದೂವರೆಗೆ ವ್ಯಾಯಾಮಶಾಲೆಗೆ ಹೋಗುವ ಅಭ್ಯಾಸವನ್ನು ಅವರ ಫ್ಯಾಮಿಲಿ ಡಾಕ್ಟರು ರೂಢಿಸಿದರು. ಬೆಳಿಗ್ಗೆ ಐದೂವರೆ ಗಂಟೆಗೆ ತಯಾರಾಗಿ ಹೊರಡಬೇಕು ಅಂದರೆ ಹುಡುಗ ಐದುಗಂಟೆಗೇ ಏಳಲು ಆರಂಭಿಸಿದ. ಬೆಳಿಗ್ಗೆ ಬೇಗ ಏಳಬೇಕಾಗಿರುವುದರಿಂದ ರಾತ್ರಿ ಬೇಗ ಮಲಗಲು ಆರಂಭಿಸಿದ. ರಾತ್ರಿ ಬೇಗ ಮಲಗಬೇಕಿರುವುದರಿಂದ ಸರಿ ರಾತ್ರಿ ಹೊತ್ತಿನವರೆಗೆ ಇರುತ್ತಿದ್ದ ಇವನ ಸುತ್ತಾಟ ಕಡಿಮೆಯಾಯಿತು. ಸುತ್ತಾಟ ಕಡಿಮೆಯಾಗಿದ್ದರಿಂದ ಬೇಡದ ಸ್ನೇಹಿತರು ದೂರವಾದರು ಮತ್ತು ಅವನಿಗೆ ಗೊತ್ತಿಲ್ಲದ ಹಾಗೆಯೇ ಅವನ ಸ್ನೇಹ ಸಭ್ಯರ ಸಂಗಡ ಹೆಚ್ಚಿತು. ಅದರ ಜತೆಗೆ ಇವನ ಇತರ ಕೆಲಸಗಳಿಗೆ ಸಮಯ ಅನಾಯಾಸವಾಗಿ ದೊರಕುತ್ತಾ ಹೋಯಿತು. ಯಾವುದಕ್ಕೂ ಅವಸರವಿಲ್ಲದೇ ನಿಧಾನವಾಗಿ ಯೋಚಿಸಿ ಕಾರ್ಯಗಳಿಗೆ ಇಳಿಯುವಂತಾದ ಅವನ ಸಮಸ್ಯೆಗಳಿಗೆ ಅತ್ಯಂತ ಸೂಕ್ತವಾದ

ಪರಿಹಾರೋಪಾಯವನ್ನು ಅವನೇ ವೈದ್ಯರ ಮೂಲಕ ಕಂಡುಕೊಂಡಿದ್ದ. ಸಮಾಜದಲ್ಲಿ ಅವನಿಗೆ ಸಿಗಬೇಕಿದ್ದ ಸ್ಥಾನಮಾನಗಳು ನಿಧಾನವಾಗಿ ದೊರಕಲು ಶುರುವಾಯಿತು. ಅಪ್ಪ ಅಮ್ಮನಿಗೆ ನಿರಂತರವಾಗಿ ಕಾಡುತ್ತಿದ್ದ ಯೋಚನೆಗಳಿಗೆ ಈಡು ಮಾಡಿದ್ದ ಸಮಸ್ಯೆ ಪರಿಹಾರ ಕಂಡುಕೊಂಡಿತ್ತು.

ಜೀವನದಲ್ಲಿ ನಮಗೆ ಅರಿವಿಲ್ಲದೆಯೇ ಅಳವಡಿಸಿಕೊಳ್ಳುವ ಒಂದು ಅಭ್ಯಾಸದ ಪಾಠ ನಮ್ಮಲ್ಲಿ ಹಲವಾರು ಶಿಸ್ತುಗಳನ್ನು ಸರಪಳಿ ಕ್ರಿಯೆಯಂತೆ ರೂಢಿಸುತ್ತದೆ ಹಾಗೂ ಇದು ನಮ್ಮ ಜೀವನವನ್ನು ಮೇಲೆತ್ತುವುದರಲ್ಲಿ ಅಪಾರವಾದ ನೆರವನ್ನು, ಬೆಂಬಲವನ್ನು ಮತ್ತು ಅದೆಲ್ಲಕಿಂತಲೂ ಹೆಚ್ಚಾಗಿ ಮಾನಸಿಕ ಸ್ಥೈರ್ಯವನ್ನು ನೀಡುತ್ತದೆ. ಈ ರೀತಿಯ ಮಾನಸಿಕ ಸ್ಥೈರ್ಯ ನಮ್ಮಲ್ಲಿ ಯಾವ ರೀತಿಯ ಆತ್ಮ ವಿಶ್ವಾಸವನ್ನು ತುಂಬುತ್ತದೆ ಎಂದರೆ ಮೊದ ಮೊದಲು ನಮ್ಮಿಂದ ಸಾಧ್ಯವೇ ಆಗದು ಎನಿಸಿದ ಕೆಲಸಗಳು ಅತಿ ಸುಲಭವಾಗಿ ಸಾಧ್ಯವಾಗಿ ಬಿಡುತ್ತದೆ ಮತ್ತು ಅಸಾಧ್ಯ ಎಂಬ ಪದವೇ ನಮ್ಮ ಪದಕೋಶದಿಂದ ದೂರ ಸರಿಯುತ್ತದೆ. ಯಾವುದನ್ನೂ ನನ್ನ ಕೈಲಿ ಆಗದು ಎಂದು ಹೇಳುವ ಮನೋಭಾವದಿಂದ ನಾವು ಬದಲಾಗಿಬಿಡುತ್ತೇವೆ. ಒಂದೇ ಒಂದು ಸನ್ನಡತೆಯನ್ನು ರೂಢಿಸಿಕೊಂಡಲ್ಲಿ ಅದರಿಂದಾಗುವ ಪರಿಣಾಮಗಳು ಲೆಕ್ಕವಿಲ್ಲದಷ್ಟು. ಇವತ್ತಿನಿಂದ ತಿನ್ನುವ ಪದಾರ್ಥವನ್ನು ಪೋಲು ಮಾಡುವುದಿಲ್ಲ ಎಂದು ನಿಶ್ಚಯಿಸಿ. ಅದರ ಪರಿಣಾಮ ವೀಕ್ಷಿಸಿ ನಿಮಗೇ ಅಚ್ಚರಿ ಹುಟ್ಟಿಸುತ್ತದೆ ನಿಮ್ಮ ಕ್ರಿಯೆ. ತಟ್ಟೆಗೆ ಬೇಕಾದಷ್ಟು ಮಾತ್ರ ಹಾಕಿಕೊಳ್ಳುತ್ತೀರಿ. ಹೆಚ್ಚು ಸುರಿದುಕೊಂಡು ಅದನ್ನು ಚೆಲ್ಲುವುದಿಲ್ಲ. ಅದಕ್ಕಿಂತಲೂ ಮಿಗಿಲು ಎಂದರೆ ನಿಮ್ಮಿಂದಾಗಿಯೇ ನಿಮ್ಮ ಮನೆಯಲ್ಲಿಯೇ ಪೋಲಾಗುತ್ತಿದ್ದ ಆಹಾರ ಪದಾರ್ಥಗಳು ಉಳಿಯುತ್ತವೆ. ಅದಕ್ಕಿಂತಲೂ ಹೆಚ್ಚಿನದು ಗೊತ್ತಾ? ಈ ಪದ್ಧತಿಯನ್ನು ನಿಮ್ಮ ಪ್ರೇರಣೆಯಿಂದ ಮನೆಯಲ್ಲಿನ ಎಲ್ಲರೂ ಅಭ್ಯಾಸ ಮಾಡುತ್ತಾರೆ. ನಿಮ್ಮ ಖರ್ಚು ಕಡಿಮೆಯಾಗುತ್ತದೆ ಹಾಗೂ ನಿಮಗೆ ಅರಿವಿಲ್ಲದ ಹಾಗೆ ಉಳಿತಾಯ ಆರಂಭವಾಗುತ್ತದೆ. ನಿಮಗೇ ಗೊತ್ತಿಲ್ಲದ ಹಾಗೆ ಒಂದು ಪುಟ್ಟ ಕ್ರಾಂತಿಗೆ ನೀವು ನಾಂದಿ ಹಾಕಿರುತ್ತೀರಿ. ಇದು ಕೊನೆಗೆ ನಿಮಗೆ ಎಂತಹ ಸಂತೃಪ್ತಿ ಹಾಗೂ ಸಂತೋಷ ನೀಡುತ್ತದೆ ಎಂದರೆ ಸಿಕ್ಕಿದವರಿಗೆಲ್ಲಾ ನೀವು ನಿಮ್ಮ ಪ್ರಯೋಗದ ಬಗ್ಗೆ ಹೇಳಿಯೇ ಹೇಳುತ್ತೀರಿ!

ಸರಪಳಿ ಕ್ರಿಯೆಗಳು ಬರಿ ರಸಾಯನಶಾಸ್ತ್ರದಲ್ಲಿ ಮಾತ್ರವಲ್ಲದೆ ಜೀವನದಲ್ಲಿಯೂ ನಡೆಯಲು ಸಾಧ್ಯ ಎಂದು ಎಲ್ಲರೂ ನಂಬಲೇಬೇಕು ಈ ಪರಿಸ್ಥಿತಿಯನ್ನು ಸೃಷ್ಟಿಸಿಬಿಟ್ಟಿರುತ್ತೀರಿ. ತಡವೇಕೆ? ಯಾವುದಾದರೂ ಹೊಸ ಪ್ರಯೋಗಕ್ಕೆ ನಿಮ್ಮನ್ನು ತೆರೆದುಕೊಳ್ಳಿ!

❋

ಯಾವ ಕುಲ?

"ಜೀವ ಯಾವ ಕುಲ?"
ಕೇಳಿದ ಕನಕ.
"ಜೀವ ಸದಾ ವ್ಯಾ-ಕುಲ"
ಹೇಳಿದ ಸಿನಿಕ.

– ಎನ್. ಪ್ರಕಾಶ್

ಎಮ್ಮ ಚೆಲುವ ಕರುನಾಡು : ಒಂಥರಾ ಮಂಥನ ಶಿಬಿರವು

- ಹೃಷಿಕೇಶ್ ಬಹದ್ದೂರ್ ದೇಸಾಯಿ

ಅವತ್ತು ನಮ್ಮೂರು ಹಾನಗಲ್ಲಿನಲ್ಲಿ 'ಕರ್ನಾಟಕ ಕುಲಪುತ್ರ ಗೂಳಿಹಟ್ಟಿ ಶೇಖರ್ ಫ್ಯಾನ್ ಕ್ಲಬ್' ಉದ್ಘಾಟನೆ. ನಾನು ಹಾಗೂ ನಮ್ಮ ಗೆಳೆಯರು ತುಂಬ ಗಡಿಬಿಡಿಯಲ್ಲಿ ಓಡಾಡಿಕೊಂಡು ಇದ್ದೆವು. ಕಾರ್ಯಕ್ರಮವನ್ನು ತುಂಬಾ ಡಿಫರೆಂಟ್ ಆಗಿ ಮಾಡಬೇಕು ಎಂದುಕೊಂಡಿದ್ದರಿಂದ ನಮಗೆ ತುಂಬ ಕೆಲಸಗಳು.

'ಬರೀ ಭಾಷಣ ಬೇಡ, ಏನಾದರೂ ಪ್ರ್ಯಾಕ್ಟಿಕಲ್ ತರಬೇತಿ ಇಟ್ಟುಕೊಳ್ಳಿ' ಅಂತ ಜಗದ್ಗುರು ರೇಣುಕಾಚಾರ್ಯ ಅವರು ಅಪ್ಪಣೆ ಕೊಡಿಸಿದ್ದರಿಂದ ತಿಂಗಳುಗಟ್ಟಲೇ ಕಷ್ಟಪಟ್ಟು ಒಂದು ಶಿಬಿರವನ್ನೇ ಆಯೋಜಿಸಿದೆವು. ಅದಕ್ಕೆ ವಿವರವಾದ ವೇಳಾಪಟ್ಟಿ ತಯಾರು ಮಾಡಿದ್ದೆವು.

ಶಿಬಿರ ತುಂಬ ಚೆನ್ನಾಗಿ ನಡೆಯಿತು. ಅದೊಂದು ಹೊಸ ರೀತಿಯ ಪ್ರಯೋಗ, ತುಂಬ ಇಂಟರೆಸ್ಟಿಂಗ್ ಅಂತ ಅನ್ನಿಸಿತು. ಓದುಗರಿಗೂ ಕುತೂಹಲ ಇರಬಹುದು ಅಂತ ಅನ್ನಿಸಿ ಇಲ್ಲಿ ಪ್ರಕಟಿಸುತ್ತಿದ್ದೇವೆ.

ಬೆಳಿಗ್ಗೆ ಐದು ಗಂಟೆಗೆ ಊರ ಹೊರಗಿನ ರಿಸಾರ್ಟಿನಲ್ಲಿ ವಾಕಿಂಗ್ ಹಾಗೂ ವ್ಯಾಯಾಮ. ದಿನಾಲೂ ವಾಕಿಂಗ್ ಮಾಡದೇ ಇದ್ದರೂ ಟೀವಿ ಕ್ಯಾಮೆರಾದ ಮುಂದೆ ತೋರಿಸಿಕೊಳ್ಳುವುದು ಹೇಗೆ ಎನ್ನುವುದರ ಬಗ್ಗೆ ನಿಕಟಪೂರ್ವ ಶಾಸಕರೊಬ್ಬರಿಂದ ಟ್ರೇನಿಂಗ್.

ಆಮೇಲೆ ತೂಕ ಇಳಿಸಿಕೊಳ್ಳುವುದರ ಬಗ್ಗೆ ಧರಂಸಿಂಗ್ ಹಾಗೂ ನಿತಿನ್ ಗಡ್ಕರಿ ಅವರಿಂದ ಚಿಂತನ. (ಇನ್ನೇನು ಅವರು ಕಸರತ್ತು ಮಾಡಿ ತೋರಿಸಲಿದ್ದಾರೆಯೇ?)

'ಸರ್ ನೀವು ತೂಕ ಇಳಿಸಲು ಏನು ಮಾಡಬೇಕು ಎಂದೇನೂ ಹೇಳಬೇಡಿ, ಏನೇನು ಮಾಡಬಾರದು' ಎಂದು ಹೇಳಿ ಎಂದು ನಾವು ಅವರಿಗೆ ವಿನಂತಿ ಮಾಡಿಕೊಂಡೆವು. ಅದಕ್ಕೇ ಈ 'ಚಿಂತನ' ವ್ಯವಸ್ಥೆ. ಅವರು ಕೂತು ಮಾತಾಡಲಿಕ್ಕೆ ಮಹಾರಾಜಾ ಸೈಜಿನ ನಾಲಕ್ಕು ಕುರ್ಚಿ ತರಿಸಿದೆವು. (ಎರಡೆರಡು ಕುರ್ಚಿ ಒಬ್ಬೊಬ್ಬರಿಗೆ ಬೇಕಲ್ಲವೇ!)

ಅನಂತರ ಕೆಂಪು ಬಣ್ಣದ ಟೀ ಶರ್ಟ್‌ನೊಂದಿಗೆ ಹಳದೀ ಬಣ್ಣದ ಜೀನ್ಸ್ ಪ್ಯಾಂಟ್ ಮ್ಯಾಚ್ ಮಾಡಿ ಹಾಕಿಕೊಂಡು ಮಿಂಚುವುದು ಹೇಗೆ ಅಂತ ಇತ್ತೀಚೆಗಷ್ಟೆ ಅನರ್ಹರಾದ ಶಾಸಕರೊಬ್ಬರಿಂದ ತರಬೇತಿ.

ನಮ್ಮ ಶಿಬಿರದ ವಿಶೇಷ ಆಕರ್ಷಣೆ ಎಂದರೆ ಅಂಗಿ ಹರಿದುಕೊಳ್ಳುವ ಬಗ್ಗೆ



ಸ್ಟೆಪ್-ಬೈ-ಸ್ಟೆಪ್ ತರಬೇತಿ. ಅದಕ್ಕೆ ಸಂಪನ್ಮೂಲ ವ್ಯಕ್ತಿ ಅಂತ ಮುಂಬಯಿಯಿಂದ ಸಲ್ಮಾನ್ ಖಾನ್ ಬಂದಿದ್ದರು. ಒಂದು ಗಂಟೆ ಕಾಲದಲ್ಲಿ ಹದಿನೈದು ಶರ್ಟು ಹರಿದು ತೋರಿಸಿದರು. ಕೊನೆಗೆ ವಂದನಾರ್ಪಣೆ ಮಾಡುವಾಗ ಕರ್ನಾಟಕದ ಬಗ್ಗೆ ಮಾತಾಡುತ್ತಾ ಭಾವುಕರಾದರು. ''ನನಗೆ ಅನ್ನದ ದಾರಿ ತೋರಿಸಿದವರೇ ಗೂಳಿಹಟ್ಟಿ ಅಣ್ಣಾ ಅವರು. ಅವರು ಇಲ್ಲದಿದ್ದರೆ ನಾವೆಲ್ಲ ನಮ್ಮಪ್ಪನಂತೆ ಹಿಂದಿ ಚಿತ್ರಗಳ ಹಾಡು ಬರೆದುಕೊಂಡು ಇರಬೇಕಿತ್ತು'' ಅಂದರು. ''ಈ ಬಾಲಿವುಡ್ ತುಂಬ ಕ್ರೂರ ಜಗತ್ತು. ಎರಡೆರಡು ಮೂರು ಮೂರು ಮದುವೆಯಾದವರದ್ದೇ ಸಾಮ್ರಾಜ್ಯ. ಇನ್ನು ಡೇಟ್ ಬಾರ್ ಆಗುತ್ತಿದ್ದರೂ ಮದುವೆಯಾಗಲಾರದ ನನ್ನಂತಹವರನ್ನು ಯಾರು ಕೇಳುತ್ತಿದ್ದರು ಹೇಳಿ?'' ಅಂತ ಕಣ್ಣೀರು ಹಾಕಿದರು.

ಅನಂತರ ಒಂದು ಬೈಠಕ್ ಅದರಲ್ಲಿ ಭ್ರಷ್ಟಾತಿ ಭ್ರಷ್ಟರನ್ನು ಸಮರ್ಥಿಸಿಕೊಳ್ಳುವುದು ಹೇಗೆ? ಎನ್ನುವುದರ ಬಗ್ಗೆ ಆಚಾರ್ಯ ಅವರಿಂದ ಉಪನ್ಯಾಸ. ಅದು ಚಹಾ ಕುಡಿಯದವರು ಬ್ರೂಕ್‌ಬಾಂಡ್ ಲಿಪ್ಟನ್ ಕಂಪನಿ ಸೇಲ್ಸ್ ಏಜೆಂಟ್ ಆದಷ್ಟೇ ಕಷ್ಟ ಎಂದ ಅವರ ಅಂಬೋಣ. ಎಲ್ಲರಿಗಿಂತ ತಡವಾಗಿ ಬಂದವರು ಸುರೇಶಕುಮಾರ್. ನಮಗೂ ಕರಿಯರ್ ಚಿಂತೆ ಶುರುವಾಗಿದೆ. ರಾಜಕೀಯದ ನಂತರ ನಾನು ಏನಾದರೂ ಮಾಡಬೇಕು ಅಂತ ರಮೇಶಕುಮಾರ್ ಅವರ ಹತ್ತಿರ ಸಲಹೆ ಕೇಳಿದೆ. ಅವರು ಟಿ.ಎನ್. ಸೀತಾರಾಮ್ ಹತ್ತಿರ ಕರೆದುಕೊಂಡು ಹೋಗಿದ್ದರು. ಹೀಗಾಗಿ ತಡವಾಯಿತು' ಅಂದರು.

ಅವರು

1. ಯಾವುದೇ ಕಾನೂನು ವಿಶ್ವವಿದ್ಯಾಲಯದಲ್ಲಿ ಕಲಿಸದ ಲಾ ಪಾಯಿಂಟ್‌ಗಳನ್ನು ಹಾಕಿ ಸದನದಲ್ಲಿ ಚರ್ಚೆ ನಿಲ್ಲಿಸುವುದು ಹೇಗೆ?
2. ಮಸೂದೆಗಳಲ್ಲಿನ ವಿವಾದಾತ್ಮಕ ವಿಷಯಗಳನ್ನು ವೈಟನರ್ ಹಾಕದೇ ಅಳಿಸುವುದು ಹೇಗೆ?
3. ದೊಡ್ಡ ಗದ್ದಲ ಆಗಬಹುದಾದಂಥ ವಿಷಯಗಳನ್ನು ಸುಗ್ರೀವಾಜ್ಞೆ ಮೂಲಕ ಸದ್ದಿಲ್ಲದೇ ಸಾಧಿಸಿಕೊಳ್ಳುವುದು ಹೇಗೆ?

ಎನ್ನುವ ಮೌಲ್ಯಯುತ ವಿಷಯಗಳ ಬಗ್ಗೆ ತಿಳಿಸಿ ಹೇಳಿದರು. ತಮ್ಮ ನೋಟ್ಸ್‌ಗಳನ್ನು ಇನ್ವಿಸಿಬಲ್ ಇಂಕ್‌ನಲ್ಲಿ ಬರೆದುಕೊಂಡು ಬಂದಿದ್ದರು.



ಊಟಕ್ಕಿಂತ ಮುಂಚೆ ಒಂದು ಪ್ರಮುಖ ಸಭೆ. ಗೋ ಹತ್ಯೆ ನಿಷೇಧದ ಕಾಯಿದೆ ಜಾರಿಗೆ ಬಂದ ನಂತರವೂ ಕೈ ಕಾಲು ಕತ್ತರಿಸುವುದು ಹೇಗೆ? ಎನ್ನುವುದರ ಬಗ್ಗೆ ಈಶ್ವರಪ್ಪ ಅವರಿಂದ ಪ್ರಾತ್ಯಕ್ಷಿತೆ.

ಊಟದ ನಂತರ ವಿಶ್ರಾಂತಿ.

ಅನಂತರ ಒಂದು ಗಂಭೀರ ಸಭೆ. ಅದರಲ್ಲಿ ಬೋಪಯ್ಯ ಅವರು ಎರಡು ವಿಷಯಗಳ ಬಗ್ಗೆ ತಮ್ಮ ಅನುಭವಗಳನ್ನು ಹಂಚಿಕೊಂಡರು.

1. ಎರಡು ಮನೆ ಬಾಡಿಗೆ ಪಡೆದೂ ರಾತ್ರಿ ಕಚೇರಿಯಲ್ಲಿ ಮಲಗುವುದು ಹೇಗೆ?
2. ಬೆಳಬೆಳಗ್ಗೆ ಹನ್ನೊಂದು ಗಂಟೆ ಹೊತ್ತಿಗೆ ಕೆಲಸ ಮಾಡದ ಸರಕಾರಿ ನೌಕರರಿಂದಲೇ ನಡುರಾತ್ರಿ ಎರಡು ಗಂಟೆಗೆ ಸರಕಾರಿ ಆದೇಶ ಹೊರಡಿಸುವುದು ಹೇಗೆ?

ದೇಶದ ಮುಂದಿರುವ ಇಂತಹ ಗಂಭೀರ ಸವಾಲುಗಳ ಬಗ್ಗೆ ಸವಿವರವಾಗಿ ಹೇಳಿದರು.

ಚಹಾದ ನಂತರ ಮಾನಪ್ಪ ವಜ್ಜಲ ಅವರಿಂದ ಕಣ್ಕಟ್ಟು. ಸಾವಿರಾರು ಜನರ ಮಧ್ಯೆ ಅದೃಶ್ಯನಾಗುವ ಕಲೆಯ ಪ್ರದರ್ಶನ. ಇದಕ್ಕೊಂದು ಸಣ್ಣ ಉಪಕಥೆ ಇದೆ. ನಾವು ಅವರನ್ನ ಒಪ್ಪಿಸಲು ಅವರ ಮನೆಗೆ ಹೋದಾಗ ಅವರು ದಕ್ಷಿಣ ಆಫ್ರಿಕಾದ ಮಾಯಾಜಾಲದ ಕಾಲೇಜಿನಲ್ಲಿ ವಿಸಿಟಿಂಗ್ ಪ್ರೊಫೆಸರ್ ಅಂತ ಪಾಠ ಮಾಡಲು ಹೋಗಿ ವಾಪಸ್ ಬಂದಿದ್ದರು.

ಶಾಸಕರ ಮನೆಯ ಜಗಲಿಯಲ್ಲಿ ಕಲ್ಕತ್ತಾದಿಂದ ಬಂದ ಪೀಸಿ ಸರಕಾರ ಕಾಯುತ್ತಾ ಕೂತಿದ್ದರು. 'ನೀವೇನು ಇಲ್ಲಿ ಅಂದರೆ' ಅಯ್ಯೋ ನಾವೆಲ್ಲ ಸ್ಟೇಜ್ ಮೇಲೆ ಮಾತ್ರ ಜಾದೂ ಮಾಡ್ತೇವೆ ಸರ್, ಇವರು ನಿಜಜೀವನದಲ್ಲಿ ಮಾಡುತ್ತಾರಲ್ಲಾ, ಅದಕ್ಕೇ ಇವರ ಹತ್ತಿರ ಕಲಿಯಕ್ಕೆ ಬಂದಿದ್ದೇವೆ'' ಅಂದರು. ಆದರೆ ಶಾಸಕರು ಅವರನ್ನು ಹತ್ತಿರಕ್ಕೂ ಸೇರಿಸಿಕೊಳ್ಳಲಿಲ್ಲ. 'ನಾನು ಆ ಡೇವಿಡ್ ಕಾಪರ್‌ಫೀಲ್ಡ್‌ನನ್ನೇ ಶಿಷ್ಯ ಅಂತ ಸ್ವೀಕರಿಸಿಲ್ಲ. ಇನ್ನು ನೀನ್ಯಾರಯ್ಯ?' ಅಂತ ಬೈದು ಕಳಿಸಿದರು. ಅವರು ಹೋದ ಮೇಲೆ 'ಅಲ್ರೀ ಸರ, ಇಂಥವರಿಗೆ ನಮ್ಮ ಟ್ರೇಡ್ ಸೀಕ್ರೆಟ್ ಹೆಂಗ ಹೇಳಿ ಕೊಡೋದು? ನಾವು ಭಾಳ ಕಷ್ಟಪಟ್ಟು ಕಲ್ತೇವಿ. ಹಿಂದಕ ಗುರುಕುಲ ಪರಂಪರೆಯೊಳಗೆ ಗುರುವಿನ ಮನ್ಯಾಗ ಇದ್ದು, ಅವರ ಕುಟುಂಬದ ಸೇವಾ ಮಾಡಿ ಒಂದು

ಚೂರು ಪಾರು ಕಲಿತ ಹಂಗ, ನಾವು ನಮ್ಮ ನಾಯಕರ ಸೇವಾ ಮಾಡಿ ಕಲಿತೇವಿ. ಇಲ್ಲಾಂದರ ಚುನಾವಣೆಯಲ್ಲಿ ಎಲ್ಲರ ಮನೆಯಂಗಳದಲ್ಲಿ ಕಾಣಿಸಿಕೊಂಡು ನಂತರ ಯಾರಿಗೂ ಕಾಣಿಸದಂತೆ ಇರೋದು ಹೇಗೆ ಅನ್ನೋ ಕೋರ್ಸ್ ಯಾರು ಹೇಳಿಕೊಡ್ತಾರ ಹೇಳ್ರಿ? ಇನ್ನು 'ಪಕ್ಷದ ಅಧ್ಯಕ್ಷರ ಕೈಗೆ ಸಿಗದೇ ಟೀವಿ ಚಾನೆಲ್‌ಗಳಿಗೆ ಬೈಟ್ ಕೋಡೊದು ಹೇಗೆ' ಅನ್ನೋದಂತೂ ಪೋಸ್ಟ್ ಗ್ರ್ಯಾಜುಏಟ್ ಕೋರ್ಸ್. ಅದಕ್ಕೆ ಜೀವನ ಪರ್ಯಂತ ಗುರುಗಳ ಹಿಂದ ತಂಬೂರಿ ಹಿಡಕೊಂಡ ಇರಬೇಕಾಗ್ತದ, 'ನಮ್ಮ ಗುರುಗಳು ಜೀವಂತ ಇರೋತನಕಾ ಚುನಾವಣೆಗೆ ನಿಲ್ಲೋದಿಲ್ಲಾ' ಅಂತ ಆಣೆ ಪ್ರಮಾಣ ಮಾಡಬೇಕಾಗ್ತದ. ಅಷ್ಟು ಕಷ್ಟಪಟ್ಟು ಸಂಪಾದಿಸಿದ ವಿದ್ಯಾನ ಈ ನನ್ನ ಮಗನಿಗೆ ಹೇಳಿ ಕೊಡ್ಲಾ? ಅವ ಹೋಗಿ ಅದನ್ನೆಲ್ಲಾ 'ಸೀಕ್ರೆಟ್ಸ್ ಆಫ್ ದ ಮ್ಯಾಜಿಷಿಯನ್ ರಿವೀಲ್ಡ್' ಅನ್ನೋ ಟೀವಿ ಪ್ರೋಗ್ರಾಂದಾಗ ಹೇಳಿಬಿಡ್ತಾನ. ಆಮ್ಯಾಲೆ ಮುಂದಿನ ಇಲೆಕ್ಷನ್ನೇನು ಇವರ ಅಪ್ಪ ನಿಲ್ತಾನ?' ಎಂದು ಸಿಟ್ಟು ಮಾಡಿಕೊಂಡರು. ಯಡ್ಯೂರಪ್ಪ ಅವರ ಬೆಡ್‌ರೂಂನಿಂದ ಕದ್ದು ತಂದಿದ್ದ ಗ್ಲಿಸರಿನ್ ಬಾಟಲ್‌ನಿಂದ ಒಂದೆರಡು ಹನಿ ತೆಗೆದು ಕಣ್ಣಿಗೆ ಹಾಕಿಕೊಂಡರು. ತಮ್ಮ ಆತ್ಮ ಗುರುವನ್ನೇ ನಾಚಿಸುವಂತೆ ಅತ್ತರು.

ನಂತರ ಶಿಬಿರದಲ್ಲಿ ಅವರು ಮಾಡಿದ ಕರಾಮತ್ತುಗಳನ್ನು ನೋಡಿ ಜನ ಕೈ ಸೋಲುವವರೆಗೆ ಚಪ್ಪಾಳೆ ತಟ್ಟಿದರು.

ಸಂಜೆ ಇನ್ನೊಂದು ಇಂಟಲೆಕ್ಚುವಲ್ ತರಬೇತಿ. ''ಯಾರಿಗೂ ಅರ್ಥ ಆಗದ ಹಾಗೆ ಟೀವಿ ಕ್ಯಾಮೆರಾದ ಮುಂದೆ ಉದ್ದುದ್ದಕ್ಕೆ ಮಾತಾಡಿ ರಿಪೋರ್ಟರ್‌ಗಳನ್ನು ಕನ್‌ಫ್ಯೂಸ್ ಮಾಡುವುದು ಹೇಗೆ'' ಅಂತ ನಾನು ಹೇಳ್ತೇನೆ ಅಂತ ಗೋಪಾಲ ಕೃಷ್ಣ ಮುಂದೆ ಬಂದರು. ಮಂತ್ರಿಮಂಡಲದಲ್ಲಿ ಅವಕಾಶ ಸಿಗದಿದ್ದರೇನು. ಇಲ್ಲಿಯಾದರೂ ಕೊಡೋಣ ಅಂತ ಕೊಟ್ಟೆವು.

'ನಾನು ಮಂತ್ರಿಯಾಗಬೇಕು, ನನಗೆ ಅಧಿಕಾರ ಬೇಕು, ಲೆಕ್ಕಕ್ಕೆ ಸಿಗದಷ್ಟು ಹಣಬೇಕು' ಎನ್ನುವುದನ್ನೇ ಬೇರೆ ಮಾತುಗಳಲ್ಲಿ ಹೇಳುವುದು ಹೇಗೆ ಅನ್ನುವುದಕ್ಕೆ ಅವರು ಒಂದು ಡಿಕ್ಷನರಿ ಮಾಡಿದ್ದರು. ಅದರಲ್ಲಿ ಶಬ್ದಗಳಲ್ಲದೇ ವಾಕ್ಯಗಳಿಗೂ ಕೂಡ ಅರ್ಥ ಕೊಡಲಾಗಿತ್ತು.

ಉದಾಹರಣೆಗೆ

1. ನಮ್ಮ ಜಿಲ್ಲೆಗೆ ರಾಜ್ಯದ ಆಡಳಿತ ಯಂತ್ರದಲ್ಲಿ ಪ್ರಾತಿನಿಧ್ಯ ಸಾಲದು ಎಂದರೆ ನನ್ನನ್ನು ಮಂತ್ರಿ ಮಾಡಿ ಎಂದು ಅರ್ಥ.
2. ನಮ್ಮ ಜಿಲ್ಲೆಯ ಅಭಿವೃದ್ಧಿಯನ್ನು ಕಡೆಗಣಿಸಲಾಗಿದೆ ಎಂದರೆ ನನಗೆ ಅಧಿಕಾರ ಬೇಕು ಅಂತ.
3. ನಮ್ಮ ಜಿಲ್ಲೆಗೆ ನೀಡಿರುವ ಅನುದಾನ ಸಾಲದು ಎಂದರೆ ನನಗೆ ಹಣಬೇಕು. ಹೇಗಾದರೂ ಮಾಡಿ ಕೊಡಿ ಅಂತ.
4. ನಮ್ಮ ಪಕ್ಷದ ನಾಯಕತ್ವ ವಿಫಲ ಎಂದರೆ ಬೇರೆ ಪಕ್ಷದವರು ನನ್ನ ಮುಂದಿನ ಚುನಾವಣೆ ಖರ್ಚು ನೋಡಿಕೊಳ್ಳಲು ಒಪ್ಪಿಕೊಂಡಿದ್ದಾರೆ ಎಂದರ್ಥ.

ಅದರ ನೂರು ಪ್ರತಿಗಳನ್ನು ಮಾಡಿ ಶಿಬಿರಾರ್ಥಿಗಳಿಗೆ ಹಂಚಿದೆವು. ಅದು ಎಷ್ಟು ಜನಪ್ರಿಯವಾಯಿತು ಎಂದರೆ ಶಿಬಿರಕ್ಕೆ ಬರಲಾಗದವರು ಅದನ್ನು ಜೆರಾಕ್ಸ್ ಮಾಡಿಸಿ ತರಿಸಿಕೊಂಡರು. ಆ ಜೆರಾಕ್ಸ್ ಅಂಗಡಿಯವನು ಅದನ್ನು ಮಾರಾಟ ಮಾಡುವ ದೊಡ್ಡ ದಂಧೆ ಶುರುಮಾಡಿದ.

'ಈ ವಿಷಯದಲ್ಲಿ ಇವರಿಗಿಂತ ಚೆನ್ನಾಗಿ ನಾನು ಮಾತಾಡ್ತೇನೆ. ಹಿಂದಿನ ಜನ್ಮದಲ್ಲಿ ನಾನು ಅಂಬೇಡ್ಕರ್ ಅವರು ಕಲಿತ ಕಾನೂನು ಕಾಲೇಜಿನ ಪ್ರಿನ್ಸಿಪಾಲ್ ಆಗಿದ್ದೆ' ಅಂತ ಉಗ್ರಪ್ಪ ಬಂದರು. ಬೇಡ ಬೇಡವೆಂದರೂ ಹಟ ಹಿಡಿದು ವೇಳಾಪಟ್ಟಿಯಲ್ಲಿ ತಮ್ಮ ಹೆಸರು ಬರೆಸಿದರು.

'ಅವರು ಬಂದ ಮೇಲೆ ನಾನೂ ಬರುವವನೇ' ಅಂತ ದತ್ತ ಬಂದರು. ಆದರೆ ಅವರು ಆಟೋ ರಿಕ್ಷಾದಲ್ಲಿ ಬಂದಿದ್ದರಿಂದ ತಡವಾಗಿ ಬಂದರು. ನಮ್ಮ ವೇಳಾಪಟ್ಟಿಯಲ್ಲಿ ಸೇರಿಸಲಿಕ್ಕೆ ಆಗಲಿಲ್ಲ. ಅದಕ್ಕೆ ವಿಷಾದವಿದೆ.

ನಮ್ಮ ಶಿಬಿರದ ಅಧಿದೇವತೆಯಾದ ರೇಣುಕಾಚಾರ್ಯ ಅವರಿಂದ ವಿಶೇಷ ಸಭೆ, ಅದರಲ್ಲಿ ಪ್ರಾಥಮಿಕ ಹಾಗೂ ಕಿರಿಯ ಮಾಧ್ಯಮಿಕ ಶಾಲೆ ಹುಡುಗರಿಗೆ ಸಾರಾಯಿ ಕುರಿತು ಜಾಗೃತಿ ಮೂಡಿಸುವುದು ಹೇಗೆ ಎನ್ನುವುದರ ಬಗ್ಗೆ ಒಂದೆರಡು ಮಾತು. ನಮಗೆಲ್ಲ ತೋರಿಸಲು ಸಾರಾಯಿಯನ್ನು ನೀರಿನಷ್ಟೇ ಸಲೀಸಾಗಿ ಕುಡಿಯುವ ದಾವಣಗೆರೆಯ ಹತ್ತು ವರ್ಷದ ಹುಡುಗನನ್ನು ಕರೆದುಕೊಂಡು ಬಂದಿದ್ದರು.

ಅನಂತರ ಶಕ್ತಿವಿಶಿಷ್ಟಾದ್ವೈತದ ಸಿದ್ಧಾಂತದ ಬಗ್ಗೆ ರೇಣುಕಾಚಾರ್ಯ ಅವರಿಂದ ಪ್ರವಚನ. ಅದರಲ್ಲಿ ಅವರು ಆಯ್ಕೆ ಮಾಡಿಕೊಂಡ ವಿಷಯ. 'ಇಲ್ಲಿ ಸಲ್ಲುವವರು ಎಲ್ಲೆಲ್ಲಿಯೂ ಸಲ್ಲುವವರಯ್ಯಾ!'

ಬಿಸಿಲು ಇಳಿದ ಮೇಲೆ ವ್ಯಕ್ತಿತ್ವ ವಿಕಸನ ಶಿಬಿರ.

'ಬ್ರಹ್ಮಚರ್ಯ ಹಾಗೂ ಹಠಯೋಗ' ಕುರಿತು ಹಾಲಪ್ಪ ಅವರಿಂದ ಎರಡು ದಿನದ ವಿಶೇಷ ಕ್ಯಾಂಪ್. ಬರೀ ಥಿಯರಿ ಬೇಡ ಎಂದು ಗಲಾಟೆ ಮಾಡಿದ ಶಿಬಿರಾರ್ಥಿಗಳನ್ನು ಹಿಂದಿನ ದಿನವೇ ಬಲವಂತದಿಂದ ಹೊರ ಹಾಕಲಾಗಿತ್ತು.

ರಾತ್ರಿ ಮಲಗುವ ಮುನ್ನ 'ಮಕಮಲ್ ಟೋಪಿ ಮತ್ತು ಅದರ ವಿವಿಧ ಉಪಯೋಗಗಳು' ಎನ್ನುವುದರ ಬಗ್ಗೆ ಕಟ್ಟಾ ಹಾಗು ಕುಟುಂಬದವರಿಂದ ಬೀದಿ ನಾಟಕ. ಮೊದಲಿಗೆ ಎಲ್ಲರೂ ತುಂಬ ನಕ್ಕರೂ ಕೊನೆ ಕೊನೆಗೆ ಎಷ್ಟೊಂದು ರಿಯಲಿಸ್ಟಿಕ್ ಆಗಿದೆಯಲ್ಲ ಅಂತ ಗಂಭೀರ ಚಿಂತನೆಗೆ ತೊಡಗಿದರು. ಅವರ ಆಟೋಗ್ರಾಫ್ ತೆಗೆದುಕೊಳ್ಳಲು ಹೋದ ಕಲಾಭಿಮಾನಿಗಳಿಗೆ 'ನನ್ನ ಮಗ ಸಹಿ ಮಾಡ್ತಾನೆ. ನಾನು ಮಾಡಿದರೂ ಒಂದೇ, ಅವರು ಮಾಡಿದರೂ ಒಂದೇ' ಅಂತ ಹೇಳಿ ಕಟ್ಟಾ ಅವರು ಜಾರಿಕೊಂಡರು.

'ಯಾರು ಬರದಿದ್ದರೂ ಇಲ್ಲ ನಾನು ಖಂಡಿತ ಬರ್ತೇನೆ' ಅಂತ ಹೇಳಿದ ಶೋಭಾ ಮೇಡಂ ಅವರು ಬರಲಿಲ್ಲ. ಅವರು ಸದಾನಂದ ಗೌಡರ ಜತೆ ಕಾಲ್ಗೇಟ್ ಕಂಪನಿ

ಜಾಹೀರಾತು ಶೂಟಿಂಗ್‌ನಲ್ಲಿ ಬಿಸಿಯಾಗಿದ್ದರಂತೆ. ಸಚಿವರೇ ಬರಲಿಲ್ಲವೆಂದ ಮೇಲೆ ನಾನಿದ್ದು ಏನು ಪ್ರಯೋಜನ ಅಂತ ಕರೆಂಟೂ ಹೋಯಿತು. ಕ್ಯಾಂಪಿಗರು ಅನಿವಾರ್ಯವಾಗಿ ಮಲಗಲೇಬೇಕಾಯಿತು.

ನಾವು ಇಷ್ಟೆಲ್ಲಾ ಮಾಡಿ ಮನೆಗೆ ಬರುವುದಕ್ಕೂ, ಗೆಳೆಯ ಶ್ರೀರಾಮುಲು ಅವರ ಫೋನ್ ಬರುವುದಕ್ಕೂ ಸರಿಹೋಯಿತು.

ಅವರ ಚೇರ್ಮನ್ ಜನಾರ್ದನರೆಡ್ಡಿ ಹಾಗೂ ಗುರುಬಂಧು ಜಗನ್ ಮೋಹನರೆಡ್ಡಿ ಅವರಿಗೆ ಮುಂಬೈ ಹಾಗೂ ದೆಹಲಿಯಲ್ಲಿ ಸ್ವಲ್ಪ ಕೆಲಸ ಇತ್ತಂತೆ.

ಅಮೇರಿಕ ಅಧ್ಯಕ್ಷ ಬರಾಕ್ ಓಬಾಮಾ ಅವರು ಮುಂಬೈ-ದೆಹಲಿಗೆ ಭೇಟಿ ನೀಡುವವರಿದ್ದರು. ಮುಂಬೈಯಲ್ಲಿ ಬಿಸಿನೆಸ್ ಮೆನ್‌ಗಳ ಜೊತೆ ಹಾಗೂ ದೆಹಲಿಯಲ್ಲಿ ರಾಜಕಾರಣಿಗಳ ಜೊತೆ ಓಬಾಮಾ ಅವರು ಭೇಟಿ ಮಾಡುವ ಪ್ರೋಗ್ರಾಂ ಇದೆ. ನಮ್ಮ ಚೇರ್ಮನ್ನರು ಬಿಸಿನೆಸ್‌ಮೆನ್‌ಗಳು ನಾಚುವಂತೆ ಬಿಸಿನೆಸ್ಸು ಹಾಗೂ ರಾಜಕಾರಣಿಗಳು ಹೊಟ್ಟೆ ಉರಿದುಕೊಳ್ಳುವ ಹಾಗೆ ರಾಜಕಾರಣ ಎರಡೂ ಮಾಡುತ್ತಾರಾದ್ದರಿಂದ ಓಬಾಮಾ ಅವರಿಗೆ ಇವರನ್ನು ಭೇಟಿ ಮಾಡುವುದು ಅನಿವಾರ್ಯ ಅನ್ನಿಸಿತಂತೆ.

ಇನ್ನು ಜಗನ್ ಅವರು ಕಡಪ ಜಿಲ್ಲೆಯ ಸಂಸತ್ ಸದಸ್ಯರಾದರೂ ಅವರು ಇರುವುದು ಬೆಂಗಳೂರಿನಲ್ಲಿ, ಆದ್ದರಿಂದ ನಮ್ಮೂರಿಗೆ ಒಂದು ಸಾರಿ ಬಂದು ಹೋಗಿ ಅಂತ ಅವರನ್ನು ಕರೆಯಲು ಹೋಗಬೇಕಾಗಿತ್ತು. ಇವರಿಬ್ಬರ ಜತೆ ಒಂದು ಮಾಧ್ಯಮ ನಿಯೋಗ ಹೋಗಲಿದೆ, ಅದರ ಸದಸ್ಯರಾಗಿ ನೀವು ಹೋಗಿ ಅಂತ ರಾಮುಲು ಅವರು ಹೇಳಿದರು.

'ಅಯ್ಯೋ ಇಲ್ಲೇ ಬಹಳಷ್ಟು ಕೆಲಸ ಇದೆ. ನಾನು ಹೋಗಲ್ಲ' ಅಂದೆ. ಅವರು ಬಿಡಲಿಲ್ಲ.

ಕೊನೆಗೆ ಗೂಳಿಹಟ್ಟಿ ಅವರು ನಮ್ಮ ಮನೆತನಕ ಬಂದರು. 'ನಿಮ್ಮ ಸೇವೆ ದೇಶಕ್ಕೆ ಬೇಕು, ನೀವು ದೊಡ್ಡ ಮನಸ್ಸು ಮಾಡಿ ಒಪ್ಪಿಕೊಳ್ಳಬೇಕು' ಅಂದರು. ಇಷ್ಟೊತ್ತೂ ತಮ್ಮ ಅಂಗಿ ಹರಕೊಂಡವರು ಈಗ ಇಲ್ಲ ಅಂದರೆ ನನ್ನ ಅಂಗಿ ಹರಿಯಬಹುದು, ಅದೆಲ್ಲಾ ಫೋಟಾಲಾ ಯಾರಿಗೆ ಬೇಕು ಅಂತ ನಾನು 'ಹೂಂ' ಎಂದೆ.

ಕೊನೆಗೂ ನಾನು ಮುಂಬೈ ವಿಮಾನ ಹತ್ತಿದೆ. ಅಲ್ಲಿಗೆ ಓಬಾಮಾ ಬರಾಕ, ನಾವು ಹೋಗಾಕ, ಸರಿ ಆಯಿತು.

ಸೌಜನ್ಯ : ಕೆಂಡಸಂಪಿಗೆ, http://www.kendasampige.com

❋

೭ ಇನ್ ಒನ್

ಹುಟ್ಟುವುದಕ್ಕೆ ಮುಂಚೆಯೇ ಮತ್ತು ಸತ್ತ ನಂತರ ಸಹ ತಿನ್ನಬಹುದಾದ ಏಕೈಕ ಪ್ರಾಣಿ – ಕೋಳಿ!

ಹಳೇ ಪುಸ್ತಕದ ಅಂಗಡಿಗಳ ಸುತ್ತಾ ಮುತ್ತಾ..

- ಗುರು

ಕಾಲೇಜಿಗೆ ಬೆಳಿಗ್ಗೆ ಮತ್ತು ಮಧ್ಯಾಹ್ನ ಶಿಫ್ಟುಗಳಲ್ಲಿ ಹೋಗುತ್ತಿದ್ದೆ ಎಂದು ಹೇಳಿದೆ ಅಲ್ಲವೇ? ನನ್ನ ವ್ಯಾಸಂಗ - ಅಂದರೆ ಕಾಲೇಜಿನ ಪಾಠಗಳ ಓದು ಸಂಪೂರ್ಣವಾಗಿ ನಡೆದದ್ದು ಕಾರ್ಖಾನೆಯಲ್ಲಿಯೇ ! (ವೃತ್ತಿಯಲ್ಲಿರುವಷ್ಟು ದಿವಸ ಇದನ್ನು ಯಾರಿಗೂ ಹೇಳಿರಲಿಲ್ಲ ನಾನು - ಫ್ಯಾಕ್ಟರಿ ಸಮಯದಲ್ಲಿಯೇ ಅಲ್ಲೇ ಕೂತು ಓದಿ ಬರೆದು ಎರಡೂವರೆ ಡಿಗ್ರೀ ಸಂಪಾದಿಸಿದ ಭೂಪ ನಾನು) ರಾತ್ರಿ ಶಿಫ್ಟಿನಲ್ಲಿ ಅಂತಹ ಕೆಲಸದ ಹೊರೆ ಇರುತ್ತಿರಲಿಲ್ಲ. ಬೇಕಾದಷ್ಟು ಸಮಯ ಸಿಗುತ್ತಿತ್ತು ಮತ್ತು ಸಮಯದ ಸದುಪಯೋಗವನ್ನು ಮಾಡಿಕೊಂಡಿದ್ದು ಓದುವ ಮೂಲಕ. ಸುಮಾರು ಸಲ ಕಾಲೇಜಿನ ಪಠ್ಯಕ್ಕೆ ಸಂಬಂಧಿಸಿದ ಪುಸ್ತಕಗಳ ಓದು ಬೇಸರ ಹುಟ್ಟಿಸುತ್ತಿತ್ತು. ಅನಿವಾರ್ಯವಾಗಿ ಬೇರೆ ಪುಸ್ತಕಗಳು ಓದಿಗೆ ಬೇಕಾಗಿದ್ದವು. ಅದಕ್ಕೆ ನಾನು ಕಂಡುಕೊಂಡ ಮಾರ್ಗವೆಂದರೆ ಮೆಜೆಸ್ಟಿಕ್‌ನ ಸುತ್ತಮುತ್ತಲಿನ ಹಳೆಯ ಪುಸ್ತಕಗಳನ್ನು ಮಾರುವ ಅಂಗಡಿಗಳು. ಬೆಳಿಗ್ಗೆ ಕಾಲೇಜು ಮುಗಿಸಿಕೊಂಡು ಈ ಹಳೆಯ ಅಂಗಡಿಗಳನ್ನು ಒಂದು ಸುತ್ತು ಹಾಕುತ್ತಿದ್ದೆ. ಆಗತಾನೆ ಅಂಗಡಿ ಬಾಗಿಲು ತೆರೆದಿರುತ್ತಿದ್ದರು. ಮೊದಲನೇ ಗಿರಾಕಿ ನಾನೇ ! ಅದರಿಂದ ಸುಮಾರು ಚೌಕಸಿ ವ್ಯಾಪಾರ ನಡೆದರೂ ಕಡಿಮೆ ಬೆಲೆಗೆ ಒಳ್ಳೆಯ ಪುಸ್ತಕಗಳು ಸಿಗುತ್ತಿದ್ದವು.

ಒಂದು ತಮಾಷೆ ಎಂದರೆ ನನ್ನ ತರಹವೇ ಈ ಪುಸ್ತಕದ ಬೇಟೆಗೆ ಬರುತ್ತಿದ್ದ ಖ್ಯಾತನಾಮರು. ಹಾಮಾನಾ, ಹಂಪನಾ ಅವರು ಜತೆಜತೆಯಲ್ಲಿಯೇ ಒಂದು ಪುಸ್ತಕ ವ್ಯಾಪಾರ ನಡೆಸುತ್ತಿದ್ದರು. ಜಿ.ಪಿ. ರಾಜರತ್ನಂ ಅವರದ್ದು ಬೇರೆ ರೀತಿಯ ವ್ಯಾಪಾರ. ಅಂಗಡಿಗೆ ಬರುವರು, ಒಟ್ಟಿಗೆ ಎಂಟೋ ಹತ್ತೋ ಪುಸ್ತಕ ಆರಿಸುವರು ಮತ್ತು ಒಟ್ಟಾರೆಯಾಗಿ ಬೆಲೆ ಕುದುರಿಸಿ ಕೊಳ್ಳುವರು. ಸುಮಾರು ಸಲ ಆರಿಸಿದವುಗಳೆಲ್ಲವನ್ನೂ ಕೊಳ್ಳದೇ ಅದರಲ್ಲಿ ಕೆಲವನ್ನು ಆಯ್ಕೆಮಾಡಿಕೊಳ್ಳುತ್ತಿದ್ದರು. ಜಿ.ಪಿ. ರಾಜರತ್ನಂ ಅವರು ಹೆಚ್ಚಾಗಿ ಈ ಹಳೇ ಪುಸ್ತಕದ ಅಂಗಡಿಗಳಿಂದ ಒಯ್ಯುತ್ತಿದುದು ಪೆರಿಮ್ಯಾಸನ್ ಪುಸ್ತಕಗಳನ್ನ. ಅದೇ ಪುಸ್ತಕಗಳನ್ನ ಓದಿಯಾದ ನಂತರ ಅದೇ ಅಂಗಡೀಗೆ ವಾಪಸ್ಸು ಮಾಡುತ್ತಿದ್ದರು. ಅಂಗಡಿಯವರ ಜತೆ ಉತ್ತಮವಾದ ಬಾಂಧವ್ಯವನ್ನು ಹೊಂದಿದ್ದರು. ಒಂದು ಸಲ ಅವರು ಒಂದು ಟಿಪ್ಸ್ ಕೊಟ್ಟರು ನನಗೆ. ಯಾವುದೋ ಒಂದು ಪುಸ್ತಕ ಬೇಕಾಗಿದ್ದರೂ ಒಟ್ಟಿಗೆ ಆರೇಳು ಪುಸ್ತಕ ಕೈಲಿ ಹಿಡಿಯಬೇಕು. ಒಟ್ಟು ಎಷ್ಟಾಗುತ್ತೆ ಅಂತ ಕೇಳಬೇಕು. ನಿಧಾನಕ್ಕೆ ಅದನ್ನ ಕಡಿಮೆ ಮಾಡಿಕೊಂಡು ನಿಮಗೆ ಬೇಕಾಗಿರೋ ಪುಸ್ತಕಕ್ಕೆ ಸೀಮಿತಗೊಳಿಸಬೇಕು. ಆಗ ನಿಮಗೆ ಬೇಕಾದ ಪುಸ್ತಕ ನಿಮಗೆ ಕಡಿಮೆ ರೇಟಿನಲ್ಲೇ ಸಿಗುತ್ತೆ ! ಸುಮಾರು ಸಲ ಈ ಪ್ರಯೋಗ ಮಾಡಿ ಯಶಸ್ವಿಯಾಗಿದ್ದೇನೆ. ಒಂದು ಸಲ ಜಿ.ಪಿ. ರಾಜರತ್ನಂ ಅವರು ಬರುವುದನ್ನು ಗಮನಿಸಿದ

ನಾನು ಅವರಿಗಿಂತಲೂ ಮೊದಲೇ ಓಡಿದೆ – ಅಲ್ಲಿದ್ದ ಐದು ಪೆರಿಮ್ಯಾಸನ್ ಕೈಲಿ ಹಿಡಿದೆ. ಅವರು ಬಂದರು, ನನ್ನ ಕೈಲಿ ಅವರಿಗೆ ಬೇಕಾದ ಪುಸ್ತಕ ಇದೆ. ಏನೂ ಮಾತನಾಡದೇ ಬೇರೆ ಯಾವುದೋ ಇಂಗ್ಲಿಷ್ ಪುಸ್ತಕ ಕೊಂಡು ಸರಸರ ನಡೆದರು ! ಛೇ ಹಾಗೆ ಮಾಡಬಾರದಿತ್ತು ಅಂತ ನಂತರ ನಾನು ಪೇಚಾಡಿಕೊಂಡೆ !

ಪುಸ್ತಕದ ವ್ಯಾಪಾರದಲ್ಲಿ ನಾನು ಮಾಡಿರುವ ದಾಖಲೆಗಳು ಅಪಾರ! ಶಿವರಾಮಕಾರಂತರ ಬಾಲಪ್ರಪಂಚದ ಒಂದು ವಾಲ್ಯೂಮು ಎಂಟಾಣೆಗೆ ತಗೊಂಡಿದೀನಿ, ಪಿಯರ್ಸ್ ಎನ್‌ಸೈಕ್ಲೋಪೇಡಿಯಾ ಅರವತ್ತು ಪೈಸೇಗೆ ಕೊಂಡಿದೀನಿ. ಒಂದುಸಲ ಯಾವುದೋ ಲಾಯರ್ ಆಫೀಸು ಖಾಲಿಯಾಗಿದ್ದಕ್ಕೋ ಏನೋ ಲಾ ಜರ್ನಲ್‌ಗಳು ಲಾ ಪುಸ್ತಕಗಳು ಎಂಟಾಣೆಗೆ ಗುಡ್ಡೆ ಹಾಕಿ ಮಾರಿದಾಗ ಹೊತ್ತು ತರುವಷ್ಟು (ಹತ್ತು ರೂಪಾಯಿಗೆ ಅರವತ್ತು ಕೇಜಿ ತೂಗುವಷ್ಟು) ಪುಸ್ತಕ ಹೊತ್ತು ಮನೆ ಸೇರಿದೆ. ಆಗಿನ್ನೂ ಮದುವೆಯಾಗಿರಲಿಲ್ಲ – ಅದರಿಂದ ಮನೆಯಲ್ಲಿ ಯಾರೂ ಬೈಯ್ಯುವವರು ಇರಲಿಲ್ಲ! ಈ ಕಾರಣದಿಂದ ನನ್ನ ಮನೆಯ ಅಟ್ಟದಮೇಲೆ ಈ ಹಳೇ ಪುಸ್ತಕಗಳು ಬೇಕಿರಲಿ ಬೇಡದಿರಲಿ ಬಂದು ತುಂಬುತ್ತಿದ್ದವು. ಈ ಲಾ ಪುಸ್ತಕಗಳಂತೂ ಹತ್ತೋ ಹದಿನೈದೋ ವರ್ಷದ ನಂತರ ನಾನೇ ತೂಕಕ್ಕೆ ಮಾರಿದೆ – ಸುಮಾರು ಜನ ಲಾಯರು ಗೆಳೆಯರನ್ನ ಈ ಪುಸ್ತಕಗಳು ಬೇಕೇ ಎಂದು ಕೇಳಿ, ಅವರು ಅವು ಔಟ್ ಡೇಟೆಡ್ ಕಣಯ್ಯಾ ಅಂದನಂತರ ಭಾರೀ ವ್ಯಸನದಿಂದ ಮಾರಿದೆ !

ಸುಮಾರು ಪುಸ್ತಕಗಳನ್ನು ಓದಿದ ನಂತರ ಬಿಸಾಕಲು ಮನಸ್ಸು ಬರುತ್ತಿರಲಿಲ್ಲ ಮತ್ತು ಯಾರಿಗಾದರೂ ಓದುವವರಿಗೆ ನೀಡೋಣವೆಂದರೆ ಓದಿನಲ್ಲಿ ಆಸಕ್ತಿ ಇದ್ದ ಗೆಳೆಯರು ಅಪರೂಪ ! ಮನೆಯ ತುಂಬ ತುಂಬಿಸಿಕೊಂಡ ಪುಸ್ತಕಗಳನ್ನು ವಿಲೇವಾರಿ ಸಮಸ್ಯೆ ನನಗೆ ಎದುರಾದದ್ದು ನಾನು ಕೆಲಸದಿಂದ ನಿವೃತ್ತನಾದ ನಂತರ. ಅದರ ಕಥೆಗೆ ಮತ್ತೊಮ್ಮೆ ಬರಲೇಬೇಕು ಆ ಅನುಭವ ಹಾಗಿದೆ !

ಪಿ ಜಿ ವೋಡ್‌ಹೌಸ್ ಅವರ ಪುಸ್ತಕಗಳ ಬಗ್ಗೆ ನನಗೆ ಪ್ರೀತಿ ಹುಟ್ಟಿದ್ದು ಇದೇ ಸಮಯದಲ್ಲಿ. ಅವರ ಸರಿಸುಮಾರು ಎಲ್ಲ ಪುಸ್ತಕಗಳೂ ನನ್ನ ಬಳಿ ಶೇಖರವಾಗಿತ್ತು, ಕೆಲವನ್ನು ಆರೇಳು ಬಾರಿ ಓದಿರುವುದೂ ಉಂಟು. ವೋಡ್‌ಹೌಸ್ ಪುಸ್ತಕಗಳನ್ನು ಓದಬೇಕಾದರೆ ನನಗೇ ಅರಿವಿಲ್ಲದ ಹಾಗೆ ನಗುತ್ತಿದುದೂ ಉಂಟು. ಸುಮಾರು ಸಲ ರಾತ್ರಿಯ ಶಿಫ್ಟಿನಲ್ಲಿ ನಾನು ಪುಸ್ತಕ ಹಿಡಿದು ನಗುತ್ತಾ ಕೂತಿರುವುದನ್ನು ನೋಡಿದ ನನ್ನ ಗೆಳೆಯರು ನಮ್ಮ ಸ್ಟೋರ್ಸಿನ ಮುಂದೆ ಗುಂಪು ಕೂಡುತ್ತಿದ್ದರು ! ವೋಡ್‌ಹೌಸ್ ಅವರ ಹೊಸಾ ಪುಸ್ತಕಗಳು ಆಗ ಮೂವತ್ತು ರೂಪಾಯಿನಿಂದ ನೂರ ಹತ್ತು ರೂಪಾಯಿನವರೆಗೆ ಅಂಗಡಿಯಲ್ಲಿ ದೊರೆತರೆ ಹಳೇ ಅಂಗಡಿಯಲ್ಲಿ ಹಳೇ ಪ್ರಿಂಟುಗಳು ಎರಡು ರೂಪಾಯಿನಿಂದ ಹಿಡಿದು ಹದಿನೈದು ರೂಪಾಯಿಗೆ ಸಿಗುತ್ತಿತ್ತು – ನೀವು ಚೌಕಾಸಿ ಮಾಡುವ ತಾಖತ್ತಿನ ಮೇಲೆ.

ಕೋಡ್ ಆಫ್ ದಿ ವೂಸ್ಟರ್ಸ್, ಮುಲ್ಲಿನರ್ ನೈಟ್ಸ್, ಡ್ಯಾಮ್ಸೆಲ್ ಇನ್ ಡಿಸ್ಟ್ರೆಸ್, ಪಿಕಾಡೆಲಿ ಜಿಮ್, ಥ್ಯಾಂಕ್ ಯು ಜೀವ್ಸ್.. ಹೀಗೆ ಓದಿದ ಪುಸ್ತಕಗಳ ಲೆಕ್ಕವೇ ಇಲ್ಲ. ಮುಂದೆ ನಾನು

ಹಾಸ್ಯ ಅಂತ ಬರೆಯಲು ಪ್ರೇರಣೆ ಸಿಕ್ಕಿದ್ದೇ ವೋಡ್‌ಹೌಸ್‌ರಿಂದ ಅಂತ ಹೇಳಬಹುದು. ಹಳೇ ಅಂಗಡಿಯಲ್ಲಿ ಸಿಕ್ಕದ ಆದರೆ ಹೊಸಾ ಅಂಗಡಿಯಲ್ಲಿ ಸಿಗುವ ಪುಸ್ತಕಗಳೂ ಆಕರ್ಷಿಸುತ್ತಿದ್ದವು – ಹೀಗೆ ಹೊಸದು ಮತ್ತು ಹಳೆಯದು ಸೇರಿ ಸೇರಿ ಮನೆಯ ತುಂಬಾ ಪುಸ್ತಕಗಳು ತುಂಬಿಹೋದವು ! (ಹಳೇ ಬೇರು ಹೊಸ ಚಿಗುರು...!) ರೋಜೆಟ್‌ನ ಥೆಸಾರಸ್ (ಎರಡೂವರೆ ಕೇಜಿ ತೂಕ) ಒಂದೂವರೆ ರೂಪಾಯಿಗೆ ಕೊಂಡ ನೆನಪು ಈಗಲೂ ಅಚ್ಚ ಹಸಿರು.

ಇನ್ನೂ ಒಂದು ತಮಾಷೆ ಗೊತ್ತಾ? ವೋಡ್‌ಹೌಸ್ ಪುಸ್ತಕವನ್ನು ಯಾವಾಗಲೇ ಎಷ್ಟನೇ ಸಲವೇ ಆಗಲಿ ಓದಿದರೂ ಒಂದು ಹಾಸ್ಯ ಲೇಖನ ಬರೆಯುವ ಹುಚ್ಚು ಹತ್ತುಬಿಡ್ತಾ ಇತ್ತು! ಜೀವ್ಸ್ ಓಮ್ನಿಬಸ್ ಎನ್ನುವ ಸುಮಾರು ಆರುನೂರುಪುಟಗಳ ಪುಸ್ತಕ ಎರಡು ರೂಪಾಯಿಗೆ ಕೊಂಡಿದ್ದೆ. ಅಷ್ಟು ಓದಿದ ಮೇಲೆ ಬರೆಯುವ ಹುಚ್ಚು ಹತ್ತಲಿಲ್ಲವೇ ಅಂತ ನೀವು ಕೇಳೇಕೇಳ್ತೀರಿ ಅಂತ ಗೊತ್ತು. ಬರೆಯುವುದು ನಮ್ಮ ಕೆಲಸ ಅಲ್ಲ ಅಂತ ಸುಮ್ಮನೆ ಇದ್ದೆ. ಬರೆಯುವ ಹುಚ್ಚು ಅಂಟಿಸಿಕೊಂಡಿದ್ದೂ ಬೇರೆ ಥರಹ. ಸುಮಾರು ಹತ್ತು ಹದಿನೈದು ವರ್ಷ ಬರೇ ಓದಿದ್ದು – ಅದೂ ಇಂಗ್ಲಿಷ್, ಕನ್ನಡ ಪುಸ್ತಕಗಳನ್ನ.

ಈಗಲೂ ಉಪ್ಪಾರಪೇಟೆಯ ಗಲ್ಲಿಗಳ ಹತ್ತಿರ, ಮೆಜೆಸ್ಟಿಕ್‌ನ ಕೆಲವು ರಸ್ತೆಗಳ ಸುತ್ತ ಸುಳಿದಾಡಿದಾಗ ಹಳೆಯ ಪುಸ್ತಕಗಳ ಅಂಗಡಿಗಳ ಹತ್ತಿರ ಕಾಲು ಎಳೆದುಕೊಂಡು ಹೋಗುತ್ತೆ. ಹಳೇ ನೆನಪುಗಳನ್ನು ಒದ್ದು ತರುತ್ತೆ. ಆದರೆ ಯಾಕೋ ಪುಸ್ತಕಗಳನ್ನು ಕೊಳ್ಳಬೇಕೆನ್ನುವ ಆಗಿನ ಉತ್ಸಾಹ ಈಗ ಇಲ್ಲ. ಉತ್ಸಾಹ ಕುಂಠಿತವಾಗಲು ಬಹುಶಃ ಪುಸ್ತಕಗಳ ಬೆಲೆ ಇರಬಹುದೇ ಎಂದು ಯೋಚಿಸಿದ್ದೇನೆ. ಆದರೆ ಪುಸ್ತಕಗಳನ್ನು ಪ್ರಿಂಟ್ ಹಾಕಿಸಿ ಮಾರುವ ಅನುಭವವನ್ನೂ ಪಡೆದಿರುವುದರಿಂದ ಬೆಲೆ ಹೆಚ್ಚು ಎಂದು ಕಾರಣ ಹೇಳುವಹಾಗಿಲ್ಲ ! ಓದಿನ ಆಸಕ್ತಿ ಕಡಿಮೆಯಾಗಿದೆ ಎಂದೇ ನನ್ನ ಭಾವನೆ !

❋

ಈಗ ಸಾಧ್ಯ

ಸ್ವಾಮಿ ಚಿನ್ಮಾಯನಂದ ಚೆನ್ನೈನಲ್ಲಿ ತಮ್ಮ ಪ್ರವಚನಕ್ಕಾಗಿ ಸೂಕ್ತ ಜಾಗ ಹುಡುಕುತ್ತಿದ್ದರು. ಸರಿಯಾದ ಜಾಗ ಯಾವುದೂ ದೊರೆಯುತ್ತಿರಲಿಲ್ಲ. ಮುಂದೇನು? ಎಂದು ಯೋಚಿಸುತ್ತಿದ್ದಾಗ ಅವರ ಶಿಷ್ಯ ಓಡಿ ಬಂದು ಮುಸ್ಲಿಮರೊಬ್ಬರು ತಮ್ಮ ಖಾಲಿ ಇರುವ ಬಂಗಲೆಯನ್ನು ಪ್ರವಚನಕ್ಕಾಗಿ ಬಿಟ್ಟುಕೊಡಲು ತಯಾರಿದ್ದಾರೆ ಎಂದು ಹೇಳಿದ. "ಆದರೆ ಒಂದು ಸಮಸ್ಯೆ ಸ್ವಾಮೀಜಿ" ಎಂದ. "ಅದು ಭೂತ ಬಂಗಲೆ" ಎಂದ ಹೆದರಿಕೊಂಡು.

"ವ್ಹಾ! ಎಂತಹ ಅವಕಾಶ ದೊರೆತಿದೆ. ನಾನು ದೆವ್ವಗಳನ್ನು ನೋಡಿಯೇ ಇಲ್ಲ. ಈಗ ಸಾಧ್ಯ" ಎಂದರು ಚಿನ್ಮಾಯನಂದ ಖುಷಿಯಿಂದ.

ರಾ.ಶಿ.ಯವರ ಒಂದು ನೆನಪು

- ಕೆ.ಎಸ್. ಶ್ರೀನಿವಾಸಮೂರ್ತಿ

1977-78ರಲ್ಲಿರಬಹುದು. ನಾನು K.R.Circleನಲ್ಲಿರುವ ನಮ್ಮ ಆಫೀಸಿನಿಂದ ಕೆಂಗೇರಿ ಉಪನಗರದಲ್ಲಿದ್ದ ಮನೆಗೆ ನಿತ್ಯ ರೈಲಿನಲ್ಲಿ ಪಯಣಿಸುತ್ತಿದ್ದೆ. ಹಾಗೆ ಒಂದು ಸಂಜೆ ಆಫೀಸಿನಿಂದ ರೈಲ್ವೆ ನಿಲ್ದಾಣಕ್ಕೆ ಹೋಗುತ್ತಿದ್ದಾಗ ಮೈಸೂರು ಬ್ಯಾಂಕ್ ಚೌಕದಲ್ಲಿದ್ದ ಲಾ ಕಾಲೇಜು ಮುಂದೆ ಬಂದಾಗ "ಲಾ ಕಾಲೇಜಿನ ವಲಿಡೆಕ್ಟರಿ ಅಡ್ರೆಸ್ Dr. ಎಂ. ಶಿವರಾಮ್‌ರವರಿಂದ' ಎಂಬ ಫಲಕವನ್ನು ನೋಡಿ ಒಳಗೆ ಹೋಗಿ ಕೂತೆ. ಸ್ವಲ್ಪ ಹೊತ್ತಿನಲ್ಲಿ ಕಾರ್ಯಕ್ರಮ ಪ್ರಾರಂಭವಾಯಿತು. ಎಂ. ಶಿವರಾಮ್‌ರವರ ಹಾಸ್ಯ ಮಿಶ್ರಣದಿಂದ ಕೂಡಿದ ಭಾಷಣವನ್ನು ಕೇಳಿ ಮನಸ್ಸು ಮುದಗೊಂಡಿತು. ಅದರಲ್ಲೂ ಅವರು ಹೇಳಿದ ಒಂದು ಸಂಗತಿ ಇವತ್ತಿಗೂ ನೆನಪಿನಲ್ಲಿ ಉಳಿದಿದೆ. ಅದನ್ನು ಅವರೇ ಹೇಳಿದಂತೆ ಬರೆಯುತ್ತಿದ್ದೇನೆ.

ನನ್ನದು ವೈದ್ಯ ವೃತ್ತಿಯಾದ್ದರಿಂದ ನನಗೆ ಬಿಡುವು ಕಡಿಮೆ. ಹಾಗಾಗಿ ನಮ್ಮ ಮನೆಯವರ ಜೊತೆ ಎಲ್ಲಿಗೂ ಹೋಗುತ್ತಿರಲಿಲ್ಲ. ಆದರೆ ಒಮ್ಮೆ ನನ್ನ ಮಡದಿಯು ಒಂದು ಒಳ್ಳೆಯ ಕನ್ನಡ ಚಿತ್ರ ಬಂದಿರುವುದಾಗಿಯೂ ಅದಕ್ಕೆ ಕರೆದುಕೊಂಡು ಹೋಗಬೇಕೆಂದು ಒತ್ತಾಯ ಮಾಡಿದಳು. ಅವಳು ಯಾವತ್ತೂ ಕೇಳದೆ ಕೇಳಿರುವುದರಿಂದ ಅವಳ ಆಸೆ ಪೂರೈಸಬೇಕಾದುದು ನನ್ನ ಧರ್ಮ ಎಂದು ತಿಳಿದುಕೊಂಡು ಆಯಿತು ಈ ದಿನ ರಾತ್ರಿ ಬೇಗ ಬರುತ್ತೇನೆ ಹೋಗೋಣ ಎಂದು ಹೇಳಿ ಬಳೇಪೇಟೆಯಲ್ಲಿದ್ದ ನನ್ನ ಶಾಪಿಗೆ ಹೋದೆ. ಅಲ್ಲಿಗೆ ಹೋದ ಮೇಲೆ ಆ ಕನ್ನಡ ಚಿತ್ರ ಗೀತಾ ಟಾಕೀಸಿನಲ್ಲಿರುವುದಾಗಿ ತಿಳಿಯಿತು. ರಾತ್ರಿ ದಿನಕ್ಕಿಂತ ಸ್ವಲ್ಪ ಮುಂಚೆ ಶಾಪನ್ನು ಮುಚ್ಚಿ ಮನೆಗೆ ಹೋಗಿ ಊಟ ಮಾಡಿ ಮನೆಯವಳನ್ನು ಕರೆದುಕೊಂಡು ಗೀತಾಟಾಕೀಸಿಗೆ 10 ಘಂಟೆಗೆ ತಲುಪಿ ಬಾಲ್ಕನಿ ಟಿಕೆಟ್ಟು ತೆಗೆದುಕೊಂಡು ಹೋಗಿ ಕೂತೆವು. ಆಗಲೆ ಚಿತ್ರ ಪ್ರಾರಂಭವಾಗಿತ್ತು. ಅಷ್ಟೇನು ಜನರಿದ್ದ ಹಾಗಿರಲಿಲ್ಲ.

ಮಧ್ಯಂತರ ಬಂದು ಲೈಟುಗಳನ್ನು ಹಾಕಿದರು. ಸುತ್ತ ನೋಡಿದರೆ ನಮ್ಮ ಜೋಡಿ ಬಿಟ್ಟರೆ ಬಾಕಿ ಇದ್ದವರೆಲ್ಲರೂ ಒಬ್ಬಂಟಿಗರೆ. ಹೊರಗಡೆ ಹೋಗಿ ಬರೋಣವೆಂದು ಹೋದೆ. ಅಲ್ಲಿ ತಿಳಿಯಿತು ಈ ಚಿತ್ರವು ಈ ದಿನ ಕೊನೆಯದಿನ ಮತ್ತು ಇದು ಕೊನೆಯ ಆಟ. ಹಾಗಾಗಿ ಅಲ್ಲಿ ಬಂದಿದ್ದವರೆಲ್ಲರೂ ಕಾಂಪ್ಲಿಮೆಂಟರಿ ಪಾಸಿನವರೆ. ಸಿನಿಮಾ ಗಾಡಿ ತಳ್ಳುವವರು ಮತ್ತು ಚೀಟಿ ಹಂಚುವವರೇ ತುಂಬಿದ್ದರು.

ಚಿತ್ರ ಶುರುವಾಯಿತು. ಒಳಗೆ ಹೋಗಿ ಕುಳಿತುಕೊಂಡೆ. ತಕ್ಷಣ ನನ್ನ ಹೆಂಡತಿಯು ಮನೆಗೆ ಹೋಗೋಣ ನಡೆಯಿರಿ ಎಂದು ವರಾತ ಮಾಡಿದಳು.

ಯಾಕೆ? ಕನ್ನಡ ಚಿತ್ರ ಪೂರ್ತಿನೋಡಿ ಬಿಡೋಣವೆಂದೆ.

ಏನೂ ಬೇಡ ಮೊದಲು ಮನೆಗೆ ಹೋಗೋಣ ನಡೆಯಿರಿ ಎಂದು ಎದ್ದೇಬಿಟ್ಟಳು. ಸರಿ ಎಂದು ನಾನು ಹಿಂಬಾಲಿಸಿದೆ.

ಮನೆಗೆ ಹೋದ ಮೇಲೆ ಅಪರೂಪಕ್ಕೆ ಕನ್ನಡ ಚಿತ್ರಕ್ಕೆ ಹೋಗಿದ್ದೆವು ಪೂರ್ತಿ ನೋಡದೆ ಯಾಕೆ ಹೀಗೆ ಮಾಡಿದೆ ಎಂದು ಕೇಳಿದೆ.

''ನಿಮ್ಮ ಜೊತೆ ಬಂದರೆ ಮರ್ಯಾದೆ ಬರುವುದಿಲ್ಲ'' ಅಂದಳು.

ಯಾಕೆ? ಏನಾಯಿತು? ಅಂಥಾದ್ದು ನಾನೇನು ಮಾಡಿದೆ ಎಂದು ಒತ್ತಾಯಿಸಿ ಕೇಳಿದ ಮೇಲೆ ಹೇಳಿದಳು.

''ಇಂಟರ್‌ವಲ್‌ನಲ್ಲಿ ನೀವು ಆಚೆ ಎದ್ದು ಹೋಗಿದ್ದಾಗ ಅಲ್ಲಿದ್ದ ಹುಡುಗರು ಮಾತಾಡಿಕೊಂಡದ್ದನ್ನು ಕೇಳಿ ಮುಜುಗರವಾಯಿತು''

ಅಂಥಾ ಮಾತನ್ನೇನಾಡಿದರು ಎಂದು ಕೇಳಿದೆ.

ಆ ಗುಂಪಿನಲ್ಲಿದ್ದ ಹುಡುಗನೊಬ್ಬ ಹೇಳುತ್ತಿದ್ದ ''ನೋಡಿದೆಯೇನೋ ಬಳೆಪೇಟೆ ಡಾಕ್ಟ್ರು ಯಾರೊ ಒಳ್ಳೆ ಹುಡಿಗೀನ ಹೊಡಕೊಂಡ್ಬಂದವರೆ'' ಅಂತ ಹೇಳಿದಳು. ನನಗೆ ಉಸಿರು ಕಟ್ಟಿದಂತಾಯಿತು.

ರಾಶಿಯವರ ಬಾಯಿಂದಲೇ ಇದನ್ನು ಕೇಳಿದ ಇಡೀ ಸಭಾಂಗಣವೇ ನಗೆಗಡಲಿನಲ್ಲಿ ಮುಳುಗಿತು.

❋

ಭಿಕ್ಷುಕನ ವಿನಂತಿ

ಒಬ್ಬಾತ ಪ್ರತಿದಿನ ಒಬ್ಬ ಭಿಕ್ಷುಕನಿಗೆ 10 ರೂಪಾಯಿ ಕೊಡುತ್ತಿದ್ದ. ಇದು ಒಂದು ವರ್ಷ ಹೀಗೇ ನಡೆಯಿತು. ನಂತರ ಅವನು ಕಾಣಿಕೆಯನ್ನು ರೂ.7.50ಕ್ಕೆ ಇಳಿಸಿದ. ಏನೂ ಇಲ್ಲದೇ ಇರೋದಿಕ್ಕಿಂತ ಇದೇ ವಾಸಿ ಎಂದುಕೊಂಡ ಭಿಕ್ಷುಕ. ಒಂದು ವರ್ಷದ ನಂತರ ಈ ಕಾಣಿಕೆ ರೂ.5ಕ್ಕೆ ಇಳಿಯಿತು.

'ಹೀಗೇಕೆ?' ಎಂದು ಭಿಕ್ಷುಕ ವಿಚಾರಿಸಿದ. '10 ರೂ ಇತ್ತು, 7.50 ಆಯಿತು, ಈಗ 5 ರೂ. ಏನು ಸಮಸ್ಯೆ?' ಎಂದು ಕೇಳಿದ.

"ಕಳೆದ ವರ್ಷ ನನ್ನ ಮೊದಲನೆ ಮಗ ಕಾಲೇಜಿಗೆ ಹೋಗತೊಡಗಿದ. ಅಲ್ಲಿ ಫೀಸು ತುಂಬಾ ದುಬಾರಿ. ನನ್ನ ಖರ್ಚು ಕಡಿಮೆ ಮಾಡಿದೆ. ಈ ವರ್ಷ ನನ್ನ ಮಗಳು ಕಾಲೇಜಿಗೆ ಹೋಗತೊಡಗಿದ್ದಾಳೆ. ಅದಕ್ಕಾಗಿ ಖರ್ಚು ಇನ್ನಷ್ಟು ಕಡಿಮೆ ಮಾಡಬೇಕಾಗಿ ಬಂದಿತು" ಎಂದು ದಾನಿ ವಿವರಿಸಿದ.

'ನಿಮಗೆ ಎಷ್ಟು ಮಂದಿ ಮಕ್ಕಳು?'

'ನಾಲ್ಕು'

'ಆದರೆ ಅವರೆಲ್ಲರನ್ನೂ ನನ್ನ ಖರ್ಚಿನಲ್ಲಿ ಓದಿಸಬೇಡಿ ಪ್ಲೀಸ್' ಎಂದು ಭಿಕ್ಷುಕ ವಿನಂತಿಸಿಕೊಂಡ.

– **ಕುಬ್ಜ**

ಹೆಣ್ಣಾಗಿ ಹುಟ್ಟಬೇಕು

- ಡಾ. ಜ್ಯೋತ್ಸ್ನಾ ಕಾಮತ್

ಕೈಲಾಸದಲ್ಲಿ ಈಶ್ವರ ಪಾರ್ವತಿಯರು ಹೇಗೆ ಸಂಸಾರ ಮಾಡುತ್ತಾರೋ ನಾನರಿಯೆ! ಆದರೆ ಭೂಲೋಕದ ಕೈಲಾಸವಾದ ಬೆಂಗಳೂರಿನಲ್ಲಿ ವಾಸಿಸುವ ನಾವಿಬ್ಬರೂ ಅರ್ಧನಾರೀಶ್ವರನ ಆದರ್ಶವನ್ನೇ ನಮ್ಮದನ್ನಾಗಿಸಿಕೊಂಡಿದ್ದೇವೆ. ಅಂದರೆ, ರಾಯರ ಮತ್ತು ನನ್ನ ವ್ಯಕ್ತಿತ್ವ ಮತ್ತು ಕಾರ್ಯ ನಿರ್ವಹಣೆಯ ವಿಂಗಡಣೆ ಮಾಡುವುದು ಅಸಾಧ್ಯ ಎನಿಸುವಷ್ಟು ಹಾಸುಹೊಕ್ಕಾಗಿವೆ. ನಸುಕಿನಲ್ಲಿಯೇ ಎದ್ದು ಫಿಲ್ಟರ್ ಹಾಕಿ ಗಮಗಮಿಸುವ ಕಾಫಿಯನ್ನು ಸಿದ್ಧಪಡಿಸುವಷ್ಟರಲ್ಲಿ ರಾಯರ ಶ್ರಮ ವ್ಯರ್ಥವಾಗಬಾರದೆಂದು ಅದನ್ನು ಸೇವಿಸಿ ಮೊದಲು ಮೆಚ್ಚಿಗೆ ಸೂಚಿಸುವವಳು ನಾನು. ಸಕಾಲಕ್ಕೆ ಸ್ವಿಚ್ ಹಾಕಿ ನೀರು ಕಾಯಿಸಿದರೆ, ಒಂದಿಷ್ಟೂ ತಡ ಮಾಡದೇ ಸ್ನಾನ ಮುಗಿಸಿ ಅದರ ಸದುಪಯೋಗದ ಹೊಣೆ ನನ್ನದು. ಬೆಳಗಿನ ನಾಶ್ತಕ್ಕೆ ಈರುಳ್ಳಿ, ಕೊತ್ತಂಬರಿ, ತರಕಾರಿ ಹೆಚ್ಚಿ, ರವೆ, ಬಿಸಿನೀರು ಇತ್ಯಾದಿಗಳನ್ನು ಇವರು ಸಿದ್ಧಮಾಡಿಕೊಟ್ಟರೆ ನಾನು ಕ್ಷಣಾರ್ಧದಲ್ಲಿ ಉಪ್ಪಿಟ್ಟು ಮಾಡುತ್ತೇನೆ. ಊಟಕ್ಕೂ ಅದೇ ಸೂತ್ರ. ಅಕ್ಕಿ, ಬೇಳೆ ತರಕಾರಿಗಳನ್ನು ತೊಳೆದು ರಾಯರು ಕುಕ್ಕರ್ ಇಟ್ಟು ಬೇಯಿಸಿದರೆಂದರೆ, ಉಳಿದ ಯಾವತ್ತೂ ಅಡಿಗೆಯ ಜವಾಬ್ದಾರಿ ನನ್ನದು. ಅವರು ಪರೀಕ್ಷಿಸಿ ನೋಡಿ ಪೇಟೆಯಿಂದ ಹೊರೆ ಹೊರೆಯಾಗಿ ಹೊತ್ತು ತರುವ ಕುರುಕಲು ತಿಂಡಿಯ ನ್ಯಾಯವಾದ 'ವಿತರಣೆ'ಯ ಹೊಣೆ ನನ್ನದೇ! ವಿಪರೀತ ಬೆಲೆ ಸುರಿದುಕೊಂಡು ತರುವ ರೇಶಿಮೆ ಸೀರೆಗಳ ಬೆಲೆ, ಬಣ್ಣಗಳ ಕುರಿತು ನಾನು ಚೌಕಾಶಿ ಮಾಡದೇ, ಗೊಣಗದೇ ಉಡಲು ಪ್ರಾರಂಭಿಸಿಯೇ ಬಿಡುತ್ತೇನೆ. ಪೆನ್ಸಿಲ್ ಕೆತ್ತಿ ಇಟ್ಟರೆ, ಪೆನ್ನಿಗೆ ಮಸಿ ಹಾಕಿ ಸಿದ್ಧಮಾಡಿದರೆ, ಅವನ್ನು ಮೊಂಡು ಮತ್ತು ಒಂದು ಮಾಡುವ ಜವಾಬ್ದಾರಿ ಹೊತ್ತಿರುತ್ತೇನೆ. ಆದಾಯಕರದ ವಾರ್ಷಿಕ ಲೆಕ್ಕಾಚಾರದ ಫಾರ್ಮುಗಳನ್ನು ತುಂಬಿಕೊಟ್ಟು ಇವರು ಗುರುತು ಹಾಕಿದಲ್ಲಿ ಹಸ್ತಾಕ್ಷರ ಹಾಕುತ್ತೇನೆ. ಮಹತ್ವದ ಕಾಗದ ಪತ್ರಗಳನ್ನು ಎಲ್ಲೋ ಇಟ್ಟು ಮರೆತು ಇವರಿಗೇ ಹುಡುಕಲು ಹಚ್ಚುತ್ತೇನೆ. ಎಂದಾದರೂ ಪ್ರವಾಸದ ಯಾವತ್ತೂ ವ್ಯವಸ್ಥೆ ಮಾಡಿದಾಗ, ಉತ್ತಮ ಸಂಗಾತಿಯಾಗಿ ಹೊರಟು ನಿಲ್ಲುತ್ತೇನೆ. ವರ್ಣ ಛಾಯಾಚಿತ್ರಗ್ರಹಣದ ಸಕಲ ಸಿದ್ಧತೆ ಮಾಡಿದಾಗ 'ಮಾಡೆಲ್' ಆಗಿ ನಿಂತು ಸಂಪೂರ್ಣ ಸಹಕರಿಸುತ್ತೇನೆ. (ಬಾಯಿಂದ ಮಾತ್ರ 'ನಿಮ್ಮ ಫೋಟೊ ಪ್ರಯೋಗಗಳಿಗೆ ನಾನೊಂದು ಬಲಿಪಶು!' ಎನ್ನುತ್ತೇನೆ.) ನನ್ನಂಥ ಸಂಪೂರ್ಣ ಸಹಕಾರಿ ಸಹಧರ್ಮಿಣಿ ಸಿಗುವುದು ದುರ್ಲಭವೆಂದು ದಿನಕ್ಕೊಂದು ಬಾರಿಯಾದರೂ ಇವರಿಗೆ ಮನದಟ್ಟು ಮಾಡದೇ ನನಗೆ ಸಮಾಧಾನವಿಲ್ಲ. ಗೃಹ ನಿರ್ವಹಣೆಯ ಹತ್ತು ಕೆಲಸಗಳನ್ನು ನೆನಪಿಟ್ಟು, ಶ್ರದ್ಧೆ, ಶಿಸ್ತು, ನಯ-ನಾಜೂಕುಗಳಿಂದ ಇವರು ಮಾಡಿದರೆ ಪ್ರಭಾವಿತಳಾಗಿ 'ನೀವು ಹೆಣ್ಣಾಗಿ ಹುಟ್ಟಬೇಕಿತ್ತೀ!' ಎಂದು ಆಗಾಗ ಮೆಚ್ಚಿಗೆ ಸೂಚಿಸುತ್ತಿದ್ದರೆ, ನನ್ನ ಗಡಿಬಿಡಿ, ಆತುರ, ಅವಸರದ ಅರೆಬರೆ ಕೆಲಸಗಳನ್ನು

ನೋಡಲಾಗದೆ 'ನೀನು ಗಂಡಾಗಿ ಅವತರಿಸಬೇಕಿತ್ತು ಕಣೇ!' ಎಂದು ರಾಯರ ತಿರುಗುಬಾಣ ಇದ್ದದ್ದೇ.

ಪತಿಯ ಸಹಕಾರವೊಂದು ಇದ್ದರೆ ಸಂಸಾರದಲ್ಲಿ ಏನೆಲ್ಲ ಸಾಧಿಸಬಹುದು ಎಂದು ಮನವರಿಕೆಯಾಗಿಹೋಗಿತ್ತು. ಅಂತೆಯೇ ಸಹೋದ್ಯೋಗಿಗಳ ಬೆನ್ನು ತಟ್ಟಿಯೋ, ಮೈಗಳ್ಳರನ್ನು ಜಬರಿಸಿಯೋ ಕಚೇರಿಯ ಕೆಲಸಗಳನ್ನು ನಿರ್ವಹಿಸಿಯೂ ಓದು-ಬರಹ ಸಂಶೋಧನೆಗಳಿಗೆ ಕೊಂಚ ಸಮಯವನ್ನು ಮೀಸಲಿಡಲು ಸಾಧ್ಯವಾಗಿತ್ತು. ಮೂರು ದಶಕಗಳ ದೀರ್ಘಕಾಲ ಇಂಥ ಜೀವನ ಒಗ್ಗಿಸಿಕೊಂಡದ್ದರಿಂದ, ನಿವೃತ್ತಿಯ ನಂತರವೂ ವೇಳೆಯ ಸದುಪಯೋಗ ಇನ್ನೂ ಹೆಚ್ಚಿಸಬೇಕೆಂದು ಯೋಚಿಸಿದೆ. ಆಡಿಸಲು ಇನ್ನೂ ಮೊಮ್ಮಕ್ಕಳು ಮೂಡಿ ಬಂದಿರಲಿಲ್ಲ. ಕಾಡಿಸಲು ಸೊಸೆಯನ್ನು ಇನ್ನೂ ಮನೆ ತುಂಬಿಸಿಕೊಂಡಿರಲಿಲ್ಲ. ಮಗ ಅಮೇರಿಕಾದಲ್ಲಿ ಹಾಯಾಗಿದ್ದಾನೆ. ವಾರಕ್ಕೊಮ್ಮೆ ಅವನೊಂದಿಗೆ ಫೋನಿನಲ್ಲಿ ಅದೆಷ್ಟು ಹೊತ್ತು ತಾನೆ ಸಂಭಾಷಿಸಲು ಸಾಧ್ಯ? ಐದು ನಿಮಿಷಕ್ಕೇ ಸಿಕ್ಕಾಪಟ್ಟೆ ದುಡ್ಡುದಂಡ. ಈಗಲಾದರೂ ರಾಯರ ಸೇವೆ ಮಾಡಿ ಕೃತಾರ್ಥಳಾಗೋಣವೆಂದರೆ, ಅವರ ಅವಶ್ಯಕತೆಗಳು ತೀರಾ ಕಡಿಮೆ. ಅನ್ನ-ಸಾರು ಮೊಸರಿನ ಊಟವೇ ಅವರಿಗೆ ಮೃಷ್ಟಾನ್ನ. ತೋಳಿನ ಬನಿಯನ್ ಮೊಳಕಾಲ ಮಟ್ಟದ ಚಡ್ಡಿಗಳೇ ಅವರ ದೈನಂದಿನ ಉಡಿಗೆ. ಉಳಿದೆಲ್ಲ ಕೆಲಸಕ್ಕೆ ಕಟ್ಟಾ ಸ್ವಾವಲಂಬಿ. ಕ್ಲಬ್, ಹರಟೆ, ಸ್ನೇಹಿತರೊಡನೆ ಸಲ್ಲಾಪಗಳೆಲ್ಲ ನಮ್ಮಿಂದ ಹರಿದಾರಿ ದೂರ. ಹೀಗಾಗಿ ಅಧಿಕಾರದಲ್ಲಿದ್ದಾಗ ಪಾಲುಗೊಳ್ಳಲಾಗದ ಚಟುವಟಿಕೆಗಳಲ್ಲಿ ನಿವೃತ್ತಿಯ ನಂತರವಾದರೂ ತೊಡಗಿಸಿಕೊಳ್ಳಲೆಂದು ಯೋಚಿಸಿದಾಗ ನೆಮ್ಮದಿಯೆನಿಸಿತು. ನನ್ನ ರೇಷ್ಮೆ ಸೀರೆಗಳೆಲ್ಲ ಖಾಯಂ ಪೆಟ್ಟಿಗೆ ಸೇರುವ ಸಂದರ್ಭ ತಪ್ಪಿತೆಂದು ಖುಷಿಯಾಯಿತು.

ಸೇವೆಯಲ್ಲಿದ್ದಾಗ, ಮಂತ್ರಿಗಳು, ಕುಲಪತಿ, ಉಪಕುಲಪತಿಗಳು, ಸಂಸ್ಥೆಗಳ ಮುಖ್ಯಸ್ಥರು, ಮಠಾಧಿಪತಿಗಳನ್ನು ಭೇಟಿ ಮಾಡುವುದು ದೈನಂದಿನ ಮಾತಾಗಿತ್ತು. ಅವರೆಲ್ಲ ಗೌರವ, ವಿಶ್ವಾಸಗಳನ್ನು ವ್ಯಕ್ತಪಡಿಸುವುದರ ಜೊತೆಗೆ, ನನ್ನಂತಹ ಜನರ ಸೇವೆ ತಮ್ಮ ಸಂಸ್ಥೆಗಳಿಗೆ ಲಭಿಸಿದರೆ ಶಿಕ್ಷಣ ಮತ್ತು ಸಂಶೋಧನೆಗಳಿಗೆ ಅದೆಷ್ಟು ಒಳ್ಳೆಯ ಚಾಲನೆ ಸಿಗುತ್ತಿತ್ತು ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದರು. ಸರಕಾರಿ ಅಧಿಕಾರಿಗಳೂ ಹಿಂದೆ ಬೀಳದೇ ಘನ ಸರಕಾರಕ್ಕೆ ನನ್ನಂಥವರ ಅವಶ್ಯಕತೆ ಎಷ್ಟಿದೆ! ಎಂದು ಬಿಂಬಿಸಲು ಯತ್ನಿಸುತ್ತಿದ್ದರು. ನಿವೃತ್ತಿಯ ನಂತರ ಅವರಿಗೆಲ್ಲ ಪತ್ರ ಬರೆದರೆ ಉತ್ತರಿಸಬಹುದೆಂಬ ನಿರೀಕ್ಷೆ ಸುಳ್ಳಾಯ್ತು. ಸದಾಕಾಲವೂ ನಮ್ಮೂರಿಗೆ ಬನ್ನಿ, ನಮ್ಮ ಅಲ್ಪ ಆತಿಥ್ಯವನ್ನು ಸ್ವೀಕರಿಸಿ ಎಂದು ಪರಿಚಿತರು, ಆತ್ಮೀಯರೆನಿಸಿಕೊಂಡವರು ಪೀಡಿಸುತ್ತಲೇ ಇದ್ದುದರಿಂದ, ಕೆಲವರಿಗೆ ನಿವೃತ್ತಿಯಾದ ವಿಚಾರ ತಿಳಿಸಿದಾಗ, ಆಕಾಶವಾಣಿ ಅದೆಂತಹ ದಕ್ಷ, ಅಪೂರ್ವ ಆಡಳಿತಗಾತಿಯನ್ನು ಕಳೆದುಕೊಂಡಿತು! ನಮ್ಮ ಸರಕಾರಕ್ಕೆ ಕುದುರೆ-ಕತ್ತೆಗಳಲ್ಲಿಯ ಭೇದವೇ ತಿಳಿಯದು ಎಂದು ತೋರಿಕೆಯ ಕಳವಳ ವ್ಯಕ್ತಪಡಿಸಿದರೇ ಹೊರತು ಒಬ್ಬರೂ ತಮ್ಮ ಹಿಂದಿನ ಆಮಂತ್ರಣದ

ಪುನರುಕ್ತಿಯಾಗುವಂತೆ ಯತ್ನಿಸಲಿಲ್ಲ! ಅಧಿಕಾರಿಣಿಯಾಗಿದ್ದಾಗ, ಭೋಜನ ಕೂಟಗಳಿಗೆ ಆಮಂತ್ರಣಗಳ ಸುರಿಮಳೆಯೇ ಇರುತ್ತಿತ್ತು. ಆಗ ಪಂಚತಾರಾ ಹೋಟೆಲುಗಳಲ್ಲಿ ಔತಣಗಳು ಸಾಮಾನ್ಯವಾಗಿದ್ದರೂ ಅವುಗಳಿಗೆ ಹೋಗುತ್ತಿರಲಿಲ್ಲ. ಸೇನಾ ವಿಭಾಗಗಳ ಆಮಂತ್ರಣಗಳನ್ನು ವೈಯಕ್ತಿಕವಾಗಿ ಹಿರಿಯ ಅಧಿಕಾರಿಗಳೇ ಬಂದು ಸೆಲ್ಯೂಟ್ ಹೊಡೆದು ಕೈಯಾರೆ ಆಮಂತ್ರಣ ಪತ್ರಿಕೆ ಕೈಗಿತ್ತು, ಆ ದಿನ ತಪ್ಪದೇ ಫೋನಿಸಿ ನೆನಪಿಸುತ್ತಿದ್ದರು. 'ಕಮಾಂಡರ್ ಸಾಹೇಬರು ಒತ್ತಾಯಿಸುತ್ತಿದ್ದಾರೆ' ಎಂಬ ಸಂದೇಶ ಇರುತ್ತಿತ್ತು. ರಾಷ್ಟ್ರೀಕೃತ ಬ್ಯಾಂಕುಗಳ ವರಿಷ್ಠ ಅಧಿಕಾರಿಗಳ ವಾರ್ಷಿಕ ಭೋಜನ ಕೂಟ, ಉಡುಗೊರೆ ವಿತರಣೆ, ಮುಖ್ಯಮಂತ್ರಿಗಳ ಸಂತೋಷ ಕೂಟ, ರಾಜ್ಯಪಾಲರ ಸ್ನೇಹ-ಸಮ್ಮೇಳನಗಳಿಗೆಲ್ಲಾ ಆಮಂತ್ರಣ ಇದ್ದೇ ಇರುತ್ತಿತ್ತು. ನಿವೃತ್ತಿಯ ನಂತರ ಒಂದೇ ಒಂದು ಇಂಥ ಆಮಂತ್ರಣ ಬಾರದ್ದರಿಂದ ವ್ಯಕ್ತಿಗಿಂತ ಅಧಿಕಾರದ ಖರ್ಚಿಗೇ ಆ ಗೌರವದ ಸಂದಾಯ ಎಂಬ ಮೊದಲೇ ಮನವರಿಕೆಯಾಗಿದ್ದ ಮಾತು ದೃಢಪಟ್ಟಿತು.

ದೊಡ್ಡವರ ಸಹವಾಸ ಎಂದೂ ಬೇಕಿರಲಿಲ್ಲ. ಇನ್ನು ಮೇಲಾದರೂ ಜನ ಸಾಮಾನ್ಯರೊಂದಿಗೆ ಒಂದಾಗಿ ಬಾಳೋಣವೆಂದು ನಿರ್ಧರಿಸಿದೆ. ಈ ಮೊದಲು ಶಾಲೆಗಳ ವಾರ್ಷಿಕೋತ್ಸವಕ್ಕೆ ಮುಖ್ಯ ಅತಿಥಿಯಾಗಿ, ವಿವಿಧ ಸಂಘಗಳ ಉದ್ಘಾಟನೆ ಮಾಡುವುದಕ್ಕೆ ಕವಿಮೇಳ ಮುಶೈರಾಗಳಲ್ಲಿ ಭಾಗವಹಿಸಲಿಕ್ಕೆ, ಪ್ರಚಾರ ಸಭೆ-ಸನ್ಮಾನ ಸಭೆಗಳಲ್ಲಿ ಗೌರವ ಅತಿಥಿಯಾಗಲಿಕ್ಕೆ ಬಹಳಷ್ಟು ಆಮಂತ್ರಣಗಳು ಬರುತ್ತಿದ್ದವು. ನೃತ್ಯ ಕಲಾವಿದರ ರಂಗಪ್ರವೇಶ, ಸಂಗೀತ ವಿದ್ವಾಂಸರ ಸತ್ಕಾರಗಳಿಗಂತೂ ಲೆಕ್ಕವಿರುತ್ತಿರಲಿಲ್ಲ. ಇವಕ್ಕೆಂದೂ ಹೋಗದಿದ್ದರೂ ಪರಿಪರಿಯಿಂದ ವಿನಂತಿಸಿಕೊಳ್ಳುತ್ತಿದ್ದರು, ಇತರರಿಂದ ಹೇಳಿಸುತ್ತಿದ್ದರು. ಹೊಗಳಿ ತಲೆ ಕೆಡಿಸುತ್ತಿದ್ದರು. ಕೆಲವೊಮ್ಮೆ ಅವರು ಹೇಳಿದ್ದು ನಿಜವಿರಬೇಕು ಎನಿಸಿದ್ದೂ ಇದೆ!

ಒಮ್ಮಿಂದೊಮ್ಮೆ ಈ ಎಲ್ಲ ಆಹ್ವಾನಗಳು ನಿಂತು ಹೋದವು. ಗೃಹಪ್ರವೇಶ, ನಿಶ್ಚಯ ತಾಂಬೂಲ, ಉಪನಯನ, ಮದುವೆಗಳ ಆಮಂತ್ರಣ ಪತ್ರಿಕೆಗಳೂ ಕೂಡ, ಸಮಾರಂಭ ಮುಗಿದ ನಂತರ ಕೈಸೇರುವ ವ್ಯವಸ್ಥೆಯಾಯಿತು. ಈ ವ್ಯವಸ್ಥೆಗೆ ಅಂಚೆಖಾತೆಯವರ ಸಂಪೂರ್ಣ ಸಹಕಾರ ಒದಗಿತು. ಮಾನವಜನ್ಮದ ಹೀನತೆಯ ಪರಿಚಯ ಈ ರೀತಿಯಲ್ಲಾಗಬೇಕೇ! ಸಮಯದ ಸದುಪಯೋಗ ಹೇಗೆ ಮಾಡಿಕೊಳ್ಳುವುದು? ಎಂಬ ಪ್ರಶ್ನೆ ಕಾಡಿಸಿ, ನನ್ನ ಗೊಂದಲದ ಮನಸ್ಥಿತಿ ತಿಳಿದುಕೊಂಡವರಂತೆ 'ಸಮಾನತಾ ಸಂಘ'ದವರು ತಮ್ಮೊಂದಿಗೆ ಸೇರಿಕೊಳ್ಳಲು ಆಮಂತ್ರಿಸಿದರು. ಅವರ ಅತ್ಯಂತ ಕಳಕಳಿಯ ಹೆಂಗಳೆಯರ ಉದ್ಧಾರಕ್ಕಾಗಿಯೇ ಹುಟ್ಟಿಕೊಂಡ ಸಂಸ್ಥೆಗೆ ಇನ್ನು ಮುಂದೆ ತನು, ಮನ, ಧನಗಳನ್ನು ಮೀಸಲಾಗಿಡಬೇಕೆಂದುಕೊಂಡೆ. 'ವಿಮುಕ್ತ ವನಿತೆ', 'ಜಾಗೃತ ನಾರಿ', 'ಮಹಿಳಾಂದೋಲನ'ಗಳ ಪ್ರತಿನಿಧಿಗಳೂ ಒಬ್ಬೊಬ್ಬರಾಗಿ ಬಂದು ಮಾತನಾಡಿಸಿ ನನ್ನ ವಿಚಾರವು ನಿರ್ಧಾರವಾಗಿ ಮಾರ್ಪಡುವಂತೆ ಸಹಕರಿಸಿದರು. 'ಆಂದೋಲನ'ದ ಪ್ರಧಾನ ಕಾರ್ಯದರ್ಶಿಯೇ ಮನೆಗೆ ಬಂದು ತಮ್ಮ ಸಂಸ್ಥೆಗೆ ಕರೆದೊಯ್ದು ಸಹೋದ್ಯೋಗಿಗಳನ್ನೆಲ್ಲ ಪರಿಚಯಿಸಿದಾಗ, ನಿವೃತ್ತ ಜೀವನವನ್ನು ಫಲಕಾರಿಯಾಗಿ ಮಾಡುವ ಸಾಧ್ಯತೆ ಕಂಡು

ನೆಮ್ಮದಿಯೆನಿಸಿತು. ಖಜಾಂಚಿಯವರು ಕೂಡಲೇ ಪ್ರತ್ಯಕ್ಷರಾಗಿ ಸಂಘ ಪ್ರಾರಂಭವಾದಾಗಿನಿಂದ ಅವರೆಗೆ ಸದಸ್ಯತ್ವದ ಮೊಬಲಗು ಎಂದು ಐದು ನೂರು ರೂಪಾಯಿಯ ಚೆಕ್ ಆ ಕೂಡಲೇ ಪಡೆದು ರಸೀದಿ ಕೊಟ್ಟರು. 'ವಿಮುಕ್ತ ವನಿತೆ'ಯವರು ವಿಶೇಷ ಸಭೆ ಕರೆದು ನನ್ನ ನಿವೃತ್ತಿಯ ನಂತರ ಬಂದ ಹಣದಲ್ಲಿ ಮಹಿಳೆಯರ ಏಳ್ಗೆಯ ಗಂಭೀರ ಚಿಂತನಪರ ಪುಸ್ತಕಕ್ಕೆ ನನ್ನ ಹೆಸರಿನಲ್ಲಿ ಪ್ರಶಸ್ತಿಯನ್ನು ಸ್ಥಾಪಿಸಬೇಕೆಂದು ಮನ ಒಲಿಸಿದರು. 'ಗಂಭೀರ ಚಿಂತನೆ'ಯ ಲೇಶಕಲ್ಪನೆಯೂ ಇಲ್ಲದ ನಾನು ಈ ವಿಚಾರಕ್ಕೆ ಪ್ರತಿಕ್ರಿಯಿಸುವ ಮೊದಲೇ ಸೇರಿದ್ದ ಲಲನಾಮಣಿಗಳೆಲ್ಲ ತುರುಸಿನ ಚರ್ಚೆ ಪ್ರಾರಂಭಿಸಿಬಿಟ್ಟರು. ಒಂದು ಗುಂಪಿನವರು ಪ್ರಾದೇಶಿಕ ಭೇದ ಮಾಡದೇ ಇಡೀ ಭಾರತೀಯ ನಾರೀವರ್ಗವನ್ನು ಪ್ರಶಸ್ತಿಗೆ ಪರಿಗಣಿಸಬೇಕು ಎಂದರೆ, ಇನ್ನೊಂದು ವರ್ಗ ಅದು ಕನ್ನಡ ನಾಡಿಗಷ್ಟೇ ಅನ್ವಯಿಸಬೇಕು ಎಂದು ಕೂಗಿ ಹೇಳಿತು. ಕನ್ನಡಿಗರಲ್ಲದಿದ್ದರೂ ಕನ್ನಡದಲ್ಲಿ ಬರೆದ ಮಹಿಳಾ ಕೃತಿಗೆ ಈ ಪ್ರಶಸ್ತಿ ಸಲ್ಲಬೇಕು ಎಂದು ಒಬ್ಬಾಕೆ ಪರಿಶೀಲಿಸಿ ನುಡಿದರೆ, ಅದನ್ನು ಸಮರ್ಥಿಸಿ ಇನ್ನೊಬ್ಬಾಕೆ, ಪ್ರಥಮ ಪ್ರಶಸ್ತಿ ಜ್ಯೋತ್ಸ್ನಾ ಅವರಿಗೇ ಸಲ್ಲಬೇಕಾದದ್ದು ನ್ಯಾಯ! ಎಂದು ವ್ಯವಹಾರ ಕುಶಲತೆ ತೋರ್ಪಡಿಸಿದಾಗ ಎಲ್ಲರೂ ಟೇಬಲ್ ಕುಟ್ಟಿ ಅದನ್ನು ಅನುಮೋದಿಸಿ ಬರೆಯದ ಪುಸ್ತಕ, ದೊರೆಯದ ಮೊತ್ತಕ್ಕೆ ನನ್ನನ್ನು ಉತ್ತರಾಧಿಕಾರಿಯನ್ನಾಗಿ ಮಾಡಬೇಕೇ?

ತಮಾಷೆ ನೋಡಲೆಂದು ಬಂದವಳಿಗೆ ಮಸೀದೆ ಕೊರಳಿಗೆ ಬಿದ್ದಂತಾಗಿ ದಿಕ್ಕೇ ತೋಚದಾಯ್ತು. 'ಈ ಕುರಿತು ರಾಯರನ್ನು ವಿಚಾರಿಸಿ ನನ್ನ ನಿರ್ಧಾರ ತಿಳಿಸುತ್ತೇನೆ' ಎಂದಾಗ, ಎಲ್ಲರ ಮುಖದಲ್ಲೂ ಆಶ್ಚರ್ಯ, ಅಪನಂಬಿಕೆ, ತಿರಸ್ಕಾರಗಳ ಕಳೆ. 'ಅಲ್ರೀ, ನಿಮ್ಮ ಹಣ ಹೇಗೆ ವಿತರಣೆ ಮಾಡುವುದೆಂದು ಅವರನ್ನು ಯಾಕ್ರೀ ಸಲಹೆಗೆ ಎಳೀತೀರಿ?' ಎಂದು ಒಟ್ಟಾಗಿ ಅಸಮಾಧಾನವನ್ನು ತೋಡಿಕೊಂಡರು- ಸಭೆಯಲ್ಲಿದ್ದ ಸಮಾನತಾ ಸಂಘದ ಸದಸ್ಯರುಗಳು. 'ನಾನು ಜೋರಾಗಿ ಉಸಿರಾಡಿಸಲು, ಗೊರಕೆ ಹೊಡೆಯಲೂ ಪತಿಯ ಪರವಾನಗಿ ಪಡೀತೀನ್ರೀ!' ಎಂದಾಗ ಮುಖ ಸಿಂಡರಿಸಿದವರೆಷ್ಟೋ ಜನ. ಇದಾವ ವಿಚಿತ್ರ ಪ್ರಾಣಿ! ಎನ್ನುವಂತೆ ಕೆಲವರು ದುರುಗುಟ್ಟಿ ನೋಡಿದರು. ಗುಜುಗುಜು ಮಾತನಾಡುತ್ತ ಮಹಿಳಾ ಪ್ರತಿನಿಧಿಗಳೆಲ್ಲ ಪ್ರತಿಭಟನೆಯೆಂಬಂತೆ ಎದ್ದು ಹೊರಟೇಬಿಟ್ಟರು. ನನ್ನನ್ನು ಕರೆತಂದ ಕಾರ್ಯದರ್ಶಿಯೂ ಕಣ್ಣಿಗೆ ಬೀಳಲಿಲ್ಲ. ಕಾರಣ ಕಾಣಿಸಲಿಲ್ಲ. ಹತ್ತಿರದಲ್ಲಿ ಯಾವ ಆಟೋ ಕೂಡ ಇರಲಿಲ್ಲ. ಅವರಿವರನ್ನು ವಿಚಾರಿಸಿ, ಸಮೀಪದ ಬಸ್‌ಸ್ಟಾಪನ್ನು ಸೇರಿ ಎರಡೆರಡು ಬಸ್ ಬದಲಾಯಿಸಿ ಉಸ್ಸಪ್ಪ! ಎಂದು ಮನೆ ಸೇರಿದೆ.

ಉಳಿದ ಆಯುಷ್ಯವನ್ನು ಪಕ್ಕಾ ಗೃಹಿಣಿಯಾಗಿ ಮನೆಯಲ್ಲೇ ಇದ್ದು ಈಗಲಾದರೂ ರಾಯರ ಸೇವೆ ಮಾಡಿದರಾಯಿತು ಎಂದು ನಿರ್ಧರಿಸಿದೆ. ಮಹಿಳಾ ಸಂಘಟನೆಗಳು ಬಿಟ್ಟಾವೆಯೇ? 'ಮಾನವತಿ' ಬಳಗದವರು ಫೋನ್ ಮಾಡಿ ಆ ದಿನ ನನ್ನ ಬೆಂಬಲಿಸದಿದ್ದುದಕ್ಕೆ ಕ್ಷಮೆ ಕೇಳಿದರು. ಮನೆಗೇ ಬಂದು ತಮ್ಮ ಬಳಗದ ಧ್ಯೇಯ

ಉದ್ದೇಶಗಳನ್ನು ವಿವರಿಸಿ, 'ಕಲಾವತಿ' ಸಂಘವೂ ತಮ್ಮಲ್ಲಿ ಸೇರ್ಪಡೆಯಾಗಲಿದೆ. ಸಂಘಕ್ಕೆ ತಾವೇ ಗೌರವಾಧ್ಯಕ್ಷರಾಗಬೇಕು ಎಂದು ಪಟ್ಟು ಹಿಡಿದು ಒಪ್ಪಿಸಿದರು. 'ತಮಗೆ ಓಡಾಟ ಕಷ್ಟ ಆದ್ದರಿಂದ ಕಾರ್ಯಕಾರಿ ಸಭೆಗಳನ್ನು ತಮ್ಮಲ್ಲಿ ನಡೆಸಬಹುದಲ್ಲ? ನಿಮ್ಮ ಮನೆಯ ಹಾಲ್ ವಿಶಾಲವಾಗಿದೆ!' ಎಂದು ಮೆಚ್ಚಿಗೆ ಸೂಚಿಸಿ ಹೋದರು.

ಮರುವಾರವೇ ಮಹಿಳೆಯರಿಗೇ ಮೀಸಲಾದ 'ಕಾವೇರಿ ಕಾವ್ಯ ಪ್ರಶಸ್ತಿ'ಯ ನಿರ್ಣಾಯಕ ಸಭೆ ನಮ್ಮಲ್ಲೇ ಸೇರುವಂತಾಯ್ತು. 5-6 ಜನರಿಗೆ ಉಪ್ಪಿಟ್ಟು-ಕೇಸರಿಭಾತು, ಕಾಫಿ-ಚಹದ ವ್ಯವಸ್ಥೆಗೆ ನಸುಕಿನಿಂದಲೇ ಒದ್ದಾಡಿದ್ದಾಯ್ತು. ವೇಳೆಗೆ ಸರಿಯಾಗಿ ಬಂದ ಪಾರ್ವತಮ್ಮನವರು ತಮ್ಮೆರಡು ಮೊಮ್ಮಕ್ಕಳನ್ನು ಕರೆದುಕೊಂಡು ಬಂದಿದ್ದರು. ಉಳಿದ ಸದಸ್ಯರು ಬರುವತನಕ ಈ ಕಿರಿಸದಸ್ಯರು ಕಿರುಚಾಟ-ಕೂಗಾಟಗಳಿಂದ ಸಮಯ ತುಂಬಿದರು. ವೆಂಕಮ್ಮನವರು 'ಆಟೋ ಸಿಗಲು ಲೇಟಾಯ್ತು!' ಎಂದರು. ಮೈಸೂರಿನಿಂದ ಬರಬೇಕಾದ ಮೈಥಿಲಿಗೆ ಸಹಜವಾಗಿಯೇ ಒಂದೂವರೆ ಗಂಟೆ ತಡವಾಗಿತ್ತು. ಅವರಾರೂ ಸ್ಪರ್ಧೆಗೆ ಬಂದ ಪುಸ್ತಕಗಳನ್ನು ಓದಿರಲಿಲ್ಲ. ಕೊನೆಗೆ ವೆಂಕಮ್ಮನವರ ಮಗಳು ಓದುವುದು, ಉಳಿದವರು ಕೇಳುವುದು ಎಂದಾಯ್ತು. ಕಾಫಿ ಸರಬರಾಜು ಆಗುತ್ತಿದ್ದಂತೆ ಮೈಥಿಲಿಗೆ ಇನ್ನೊಂದು ಮೀಟಿಂಗಿಗೆ ಹೋಗಬೇಕಾಗಿದ್ದರಿಂದ ಮೆತ್ತಗೆ ಜಾರಿಕೊಂಡರು. ಪಾರ್ವತಮ್ಮನಿಗೆ ಮದುವೆ ಮನೆಗೆ ಹೋಗಬೇಕಾಗಿತ್ತು. ನಿರ್ಣಾಯಕ ಸಭೆ ಮುಂದೆ ಬಿತ್ತು.

ಮಹಿಳೆಯರಿಗೆ ಹೆಚ್ಚಿನ ಮೀಸಲಾತಿ, ಭಡ್ತಿಗಳಲ್ಲಿ ಆದ್ಯತೆ ಮುಂತಾದ ಮಹತ್ವದ ಮುದ್ದೆಗಳ ಕುರಿತಾದ ಚರ್ಚೆ ಇಟ್ಟುಕೊಂಡ ಸಭೆಗಳೂ ಯಾವ ನಿರ್ಣಯಕ್ಕೂ ಬಾರದೇ 'ಬರ್ಖಾಸ್ತ್' ಆಗುವ ಸಂದರ್ಭಗಳು ಒದಗಿದವು. ಇವರಿಂದ ಯಾವ ಸೇವೆಯೂ ಮಹಿಳಾ ವರ್ಗಕ್ಕೆ ಸಲ್ಲುವುದಿಲ್ಲವೆಂದು ಖಾತ್ರಿಯಾಯಿತು.

ಮೂರು ನಾಲ್ಕು ಸಭೆಗಳು ಮನೆಯಲ್ಲೇ ಜರುಗಿದರೂ ರಾಯರು ಮನೆಯಲ್ಲಿರುತ್ತಿದ್ದುದು ಒಬ್ಬರಿಗೂ ತಿಳಿಯುತ್ತಿರಲಿಲ್ಲ. ತಮ್ಮ ಕಮ್ಮಟ ಸೇರಿ ಮರೆಯಾಗಿ ಬಿಡುತ್ತಿದ್ದರೂ ಅವರ ಗ್ರಹಣ ಶಕ್ತಿ ಅದ್ಭುತವಾದದ್ದೆಂದು ತಿಳಿದುಕೊಳ್ಳುವಂತೆ ಆಯಿತು. ಕಾಲಹೆಜ್ಜೆಯ ಸಪ್ಪಳದಿಂದಲೇ ಜೀಜಾಬಾಯಿ ಬರುತ್ತಿದ್ದಾರೆ ಎಂದು ಮುನ್ಸೂಚನೆ ಕೊಡುತ್ತಾರೆ. ಆವೇಳೆಯಲ್ಲಿ ಫೋನ್ ಮಾಡುವವರು ನರಸಮ್ಮ ಎಂದು ಪತ್ತೆ ಹಚ್ಚಿದ್ದಾರೆ. ಕರೆಗಂಟೆಯ ಒತ್ತುವಿಕೆಯಿಂದಲೇ ರಾಧಮ್ಮನೆಂದು ಹೇಳಿಬಿಡುತ್ತಾರೆ. ತಾನು ಮರೆಯಲ್ಲಿದ್ದರೂ ಸಭೆಯ ಯಾವತ್ತೂ ಕಾರ್ಯ ಕಲಾಪಗಳ ವರದಿಯನ್ನು ಅನಂತರ ವಿನೋದಪೂರ್ವಕ ವರದಿ ರೂಪದಲ್ಲಿ ಪ್ರಸ್ತುತಪಡಿಸುತ್ತಾರೆ. ಒಂದು ಸಭೆಯಲ್ಲಿ ಸ್ತ್ರೀಪುರುಷ ಸಮಾನತೆ ಹೇಗೆ ಸಾಧಿಸುವರೆಂದು ಬಿರುಸಿನ ಚರ್ಚೆಯಾಗಿತ್ತು. ಎಲ್ಲರೂ ಚದುರಿಹೋದ ನಂತರ ರಾಯರು ಪ್ರತ್ಯಕ್ಷರಾದರು. 'ಹೆಂಗಳೆಯರನ್ನು ನಿರ್ಮಿಸುವಾಗ ವಿಧಾತನು ಅವರ ರೂಪ, ಲಾವಣ್ಯಗಳಿಗೆ ವಿಶೇಷ ಲಕ್ಷ್ಯ ಪೂರೈಸಿ ಶಿರದಲ್ಲಿ ಮಜ್ಜಾತಂತುಗಳನ್ನು ಜೋಡಿಸುವುದನ್ನೇ ಮರೆತುಬಿಟ್ಟಿರಬೇಕು!' ಎಂದು ಕಟುವಾಗಿ ಟೀಕಿಸಿದಾಗ ಅವಾಕ್ಕಾದೆ. ಅವರು ಎಂದೂ ಯಾರ ಕುರಿತೂ ಲಘುವಾಗಿ ಮಾತನಾಡುವುದಿಲ್ಲ. ಹೆಂಗಸರನ್ನಂತೂ

ಹೆಚ್ಚಿನ ಗೌರವದಿಂದ ಕಾಣುತ್ತಾರೆ. ಅಂತೆಯೇ, 'ನಿಮ್ಮ ಜಾಯಮಾನಕ್ಕೆ ಒಪ್ಪುವಂತಹ ಮಾತೇ ಇವು?' ಎಂದು ಪ್ರಶ್ನಿಸಿದೆ. ಅವರು ಇಡೀ ಮಹಿಳಾವರ್ಗದ ಕ್ಷಮೆ ಕೋರಿಯೇ ಭಾಷಣವನ್ನು ಪ್ರಾರಂಭಿಸಿದರು. 'ನಿನ್ನ ಸ್ನೇಹಿತೆಯರಿಗೆಲ್ಲ ಭಾರತೀಯ ಸಂಸ್ಕೃತಿ, ಇತಿಹಾಸ, ಧಾರ್ಮಿಕ ಹಿನ್ನೆಲೆಗಳ ಸ್ಥೂಲ ಪರಿಚಯ ಕೂಡ ಇಲ್ಲ. ಪಾಶ್ಚಾತ್ಯರಿಂದ ಎರವಲು ತಂದ ಹಲವಾರು ಘೋಷಣೆಗಳಂತೆ ಸ್ತ್ರೀಯರ ಎಲ್ಲ ಕಷ್ಟ ನಷ್ಟಗಳಿಗೆ ಪುರುಷರೇ ಕಾರಣ ಎಂದು ದೂರುವುದರಲ್ಲಿ ಏನು ಅರ್ಥವಿದೆ? ಯಾರೋ ಬಲತ್ಕಾರ ಮಾಡಿದರು, ಎಲ್ಲೋ ಅತ್ಯಾಚಾರ ನಡೆಯಿತು. ಇನ್ಯಾರೋ ದುರಾತ್ಮರು ಹಣದಾಸೆಗೆ ಅಮಾಯಕ ಹುಡುಗಿಯರನ್ನು ಹಿಂಸಿಸಿ ಕೊಲೆ ಮಾಡಿದ್ದಕ್ಕೆ ಇಡೀ ಪುರುಷ ಸಮಾಜವನ್ನು ದೂಷಿಸುವುದು ಸರಿಯೇ? ನಮ್ಮ ಸಂವಿಧಾನದಲ್ಲಿ ಸ್ತ್ರೀ ಪುರುಷ ಸಮಾನತೆ ತೀರ ಸಹಜವೆಂಬಂತೆ ಸೇರ್ಪಡೆಯಾಗಿದೆ. ಅಂತೆಯೇ ಇಂದಿರಮ್ಮ ಪ್ರಧಾನಿಯಾಗಲು ಸಾಧ್ಯವಾಯಿತಲ್ಲದೇ ಪುರುಷರನ್ನು ಮೀರಿಸುವ ಸರ್ವಾಧಿಕಾರ ತೋರ್ಪಡಿಸಲಿಲ್ಲವೇ? ಇಂದಿನ ದಿನಗಳಲ್ಲಿ ಸಮಾನತೆಯ ಜೊತೆಗೆ ಸ್ತ್ರೀಯರಿಗೆ ಲಭಿಸಿದ ವಿಶೇಷ ಸವಲತ್ತುಗಳ ಬಗ್ಗೆ ನೀವು ಒಬ್ಬರಾದರೂ ಮುಕ್ತ ಚರ್ಚೆ ಮಾಡಿದ್ದೀರಾ? ಪುರುಷರಿಗೆ ಆಕ್ರೋಶ ಬರುವಷ್ಟು ಅವು ಹೆಚ್ಚಿವೆ! ಸ್ಥಳೀಯ ಸಂಸ್ಥೆಗಳಿಂದ ರಾಷ್ಟ್ರೀಯ ಮಟ್ಟದವರೆಗೆ ಚುನಾವಣೆಗಳಲ್ಲಿ ಮಹಿಳಾ ಮೀಸಲಾತಿ ಆದಾಯ ಕರದಲ್ಲಿ ವಿಶೇಷ ರಿಯಾಯಿತಿ, ಬಸ್ ರೈಲ್ವೆ ಪ್ರಯಾಣಗಳಲ್ಲಿ ಮೀಸಲಾತಿ, ಮಹಿಳಾ ಸಾಹಿತ್ಯಕ್ಕೆ ಮೀಸಲಾದ ಬಹುಮಾನ- ಪ್ರಶಸ್ತಿಗಳು ನಾಲ್ಕಾಣೆಯ ಕಿರಿಪುಸ್ತಕ ಬರೆದಾಕೆಯೂ ಲೇಖಕಿಯೆಂದು ಪರಿಗಣಿಸಲ್ಪಡುತ್ತಾಳೆ. ಲೇಖಕಿಯರ ಕಿರುಪರಿಚಯ - ವಿಳಾಸಗಳ ದೊಡ್ಡ ಕೋಶವೇ ಇದೆ! ಬಡ ಗಂಡಸರನ್ನು ಯಾರು ವಿಚಾರಿಸಿಕೊಳ್ಳುತ್ತಾರೆ? ಪುರುಷ ಲೇಖಕರು ತಮ್ಮದೇ ಸಂಘ ಸ್ಥಾಪಿಸಿ ಯಾವ ಪ್ರಶಸ್ತಿಗೂ ಪರಿಗಣಿಸಬಾರದು ಎಂದು ನಿರ್ಣಯಿಸಿದ್ದರೆ ನೀವೆಲ್ಲ ಸುಮ್ಮನಿರುತ್ತಿದ್ದಿರಾ? ನಮಗಿಲ್ಲದ ಎಷ್ಟೊಂದು ಸವಲತ್ತುಗಳು ನಿಮಗಿವೆ ಎಂದು ಮೊದಲಬಾರಿ ನನಗೆ ಹೊಟ್ಟೆಯುರಿ ಪ್ರಾರಂಭವಾಗಿದೆ!... ಅಂತೆಯೇ ಮುಂದಿನ ಜನ್ಮದಲ್ಲಿಯಾದರೂ ನಾನು, ಹೆಣ್ಣಾಗಿ ಹುಟ್ಟಬೇಕು!'... ಎಂದು ಉಸುರ್ಗರೆದಾಗ ನಡುವೆಯೇ ಅವರನ್ನು ತಡೆದು, 'ಬಿಡ್ತು ಅನ್ನಿ' ಎಂದೆ. 'ನಿಮ್ಮ ಸಾಧನೆಗೆ ಏನು ಕಡಿಮೆಯಾಗಿದೆ ಎಂದು ಪಾಪ, ಹೆಂಗಳೆಯರ ಮೇಲೆ ಹೊಟ್ಟೆಕಿಚ್ಚು ಪಡ್ತೀರಿ! ವಿದೇಶದಲ್ಲಿ ಪರಿಸರ ವಿಜ್ಞಾನದ ಪ್ರಸಿದ್ಧ ಕಾಲೇಜಿನ ಡಾಕ್ಟರೇಟು, ಹದಿನಾಲ್ಕು ಪುಸ್ತಕಗಳು, ಮೂರು ಬಾರಿ ಅಕಾಡೆಮಿ ಪುರಸ್ಕಾರ.. ಎಂದು ಆರಂಭಿಸಿದಾಗ ಅವರು ನಡುವೆಯೇ ಕಡಿವಾಣ ಹಾಕಿ, 'ಅಲ್ವೇ, ನೀನು ಹೇಳ ಹೊರಟ ಯಶಸ್ಸಿನ ಗಾಥೆಯಿಂದ ಆದಾಯಕರ ಕೊಡುವಷ್ಟೂ ಉತ್ಪನ್ನ ಬಾರದಿರುವಾಗ ಅವೆಲ್ಲ ಮಹಾಸಾಧನೆಗಳು ಹೇಗೆ ತಾನೇ ಆದಾವು? ಅದೇ ಹೆಣ್ಣಾಗಿದ್ದರೆ ಕಿಶೋರಿಗೆ ಕಿವಿಮಾತು, ದಂಪತಿಗಳಿಗೆ ದಾಂಪತ್ಯ ವಿಜ್ಞಾನದ ಕುರಿತು ಪಿಸುನುಡಿ, ಹರೆಯದವರಿಗೆ ಪರಿಸರ ಪ್ರಜ್ಞೆಯ ಕುರಿತು ಎಚ್ಚರದ ಗಂಟೆ, ಎಲ್ಲರಿಗೂ ಫೋಟೋ ಕಾಮಿಕ್ಸ್ ಮಾಲಿಕೆ ಬರೆದೂ ಬರೆದೂ, ಅದೆಷ್ಟೋ ಬಹುಮಾನ ಗಿಟ್ಟಿಸುತ್ತಿದ್ದೆ. ಭಾರತೀಪೀಠ, ಪ್ರವರ್ಧಮಾನ ಪ್ರಶಸ್ತಿಗಳೂ ನನ್ನವಾಗುತ್ತಿದ್ದವು. ಪ್ರಕಾಶಕರು ಚಲನಚಿತ್ರ ನಿರ್ಮಾಪಕರು ನನ್ನ ಬರವಣಿಗೆಗೆ ಹಪಹಪಿಸುತ್ತ

ಮನೆಯ ಮುಂದೆ ಸಾಲುಕಟ್ಟಿ ನಿಲ್ಲುತ್ತಿದ್ದರು... ಇವೆಲ್ಲಕ್ಕಿಂತ ಹೆಚ್ಚಾಗಿ, ನಾನು ಹೆಣ್ಣಾಗಿ ಹುಟ್ಟಿದ್ದರೆ ನಿನ್ನ ಸ್ನೇಹಿತೆಯರಾದ ಸ್ತ್ರೀ ಸ್ವಾತಂತ್ರ್ಯ ಹೋರಾಟಗಾರ್ತಿಯರಂತೆ, ವಾಕ್ ಸ್ವಾತಂತ್ರ್ಯವನ್ನು ಧಾರಳವಾಗಿ ಬಳಸಬಹುದಿತ್ತು ಮತ್ತು ವೈಯುಕ್ತಿಕ ಕುಂದುಕೊರತೆಗಳಿಗೆ ಪುರುಷರನ್ನು ಸದಾ ದೂಷಿಸಬಹುದು' ಎಂದರು.

ಸ್ವಲ್ಪ ತಡೆದು, 'ಹೆಣ್ಣಿಗೆ ಮೀಸಲಾಗಿದ್ದ ಪಾರಿತೋಷಕ ಪುರಸ್ಕಾರಗಳ ಜೊತೆಗೆ ಇತರ ಸಾಮಾನ್ಯ ಪ್ರಶಸ್ತಿಗಳೂ ಸಲ್ಲುತ್ತಿದ್ದವು... ಅಲ್ಲದೇ ವಿಶ್ವಸುಂದರಿ ಸ್ಪರ್ಧೆಯಲ್ಲೂ ಒಂದು ಕೈ ನೋಡಿ ಬಿಡಬಹುದಾಗಿತ್ತು!' ಎಂದಾಗ ಗೊಳ್ಳೆಂದು ನಕ್ಕುಬಿಟ್ಟೆ 'ಸಾಕು ಬಿಡಿ. ಈಗಲೂ ಬೊಕ್ಕ ತಲೆ, ಡೊಳ್ಳು ಹೊಟ್ಟೆ ಹೊತ್ತು 'ವಿಶ್ವಸುಂದರ' ಸ್ಪರ್ಧೆಗೆ ಹೋಗಬಹುದಂತೆ! ಎಂದು ಚುಡಾಯಿಸಿದೆ. 'ಅದೆಲ್ಲ ಮರೆತುಬಿಡು. ನಾವಿಬ್ಬರೂ ಹೆಣ್ಣಾಗಿ ಹುಟ್ಟಿದ್ದರೆ ಈ ರೀತಿ ಸಂಸಾರ ಹೂಡುವುದು ಅಸಾಧ್ಯವಾಗುತ್ತಿತ್ತು. ಪತಿ-ಪತ್ನಿಯರಾಗಿ ಬಾಳುವುದು ಅತಿಮುಖ್ಯವೇ ಹೊರತು, ಪತಿ ಯಾರು? ಪತ್ನಿ ಯಾರು ಆಗಬೇಕು? ಎಂದು ಕಚ್ಚಾಡುವುದು ಬೇಡ. ಸುಖ ಸಂಸಾರಕ್ಕೆ ಒಂದು ಸೂತ್ರ ಹೇಳಿಬಿಡುತ್ತೇನೆ. ಗಂಡನಾದವನು ಹೆಂಡತಿಗೆ ಆಗಾಗ ಹಿಂದಿನ ಜನ್ಮದಲ್ಲಿ ನೀನು ಪುರುಷನಾಗಿದ್ದಿ! ಎಂದು ಹೇಳುತ್ತಾ ಇದ್ದರೆ ಎಲ್ಲ ಸರಿ ಹೋಗುತ್ತದೆ' ಎಂದರು. ಈ ಸಾರ್ವಕಾಲಿಕ ಸೂತ್ರವನ್ನು ಎಲ್ಲ ಪುರುಷರೂ ಒಪ್ಪಿಯಾರೇ?

(ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಬಂಧ 1994ರಿಂದ ಆಯ್ದುಕೊಳ್ಳಲಾಗಿದೆ)



ಪಟ್ಟಾಪಟ್ಟಿ ಚಡ್ಡಿಯ ಸಖಿ

- ಶ್ರೀನಿವಾಸ ಕುಂಡಂತಾಯ

ಒಂದು ಪೌರಾಣಿಕ ನಾಟಕ, ನಾಟಕಕ್ಕೆ ಬೇಕಾದಷ್ಟು ನಟ ನಟಿಯರ ಕೊರತೆ ಇತ್ತು. ಕೆಲವರಿಗೆ ಎರಡೆರಡು ಪಾತ್ರ ಕೊಟ್ಟು ನಿಭಾಯಿಸಲು ಸೂಚಿಸಲಾಗಿತ್ತು. ಆ ಗ್ರಾಮದ ಪ್ರತಿಭಾವಂತ ನಟರಲ್ಲಿ ಚಡ್ಡಿ ಸುಬ್ಬಣ್ಣ ಖ್ಯಾತರು. ಅವರು ಎಂದೂ ಪಟ್ಟಾಪಟ್ಟಿ ಚಡ್ಡಿ ಹಾಕಿಕೊಂಡೇ ಓಡಾಡುವುದರಿಂದ ಅವರು "ಚಡ್ಡಿ ಸುಬ್ಬಣ್ಣ" ಎಂದೇ ಹೆಸರುವಾಸಿಯಾಗಿದ್ದರು. ದೊಳೆ ದೊಳೆಯಾದ ಕಲರ್ ಕಲರ್ ಪಟ್ಟಾಪಟ್ಟಿ ನಿಕ್ಕರ್ ಕಾಣಿಸಿಕೊಂಡಿತೆಂದರೆ ಸುಬ್ಬಣ್ಣ ಬಂದರೆಂದು ಅರ್ಥ.


ಒಂದು ಪೌರಾಣಿಕ ನಾಟಕದಲ್ಲಿ ಚಡ್ಡಿ ಸುಬ್ಬಣ್ಣನಿಗೆ ಕೆಲವು ದೃಶ್ಯಗಳಲ್ಲಿ ಗಂಡು ಪಾತ್ರ. ನಟಿಯರ ಕೊರತೆ ಇತ್ತದ್ದರಿಂದ ಕೆಲವು ದೃಶ್ಯಗಳಲ್ಲಿ ಸಖಿಯ ಪಾತ್ರ ಕೂಡ ಅವರು ನಿಭಾಯಿಸುತ್ತಿದ್ದರು. ಹೀಗಾಗಿ ಅವರು ಆಗಾಗ ಗಂಡು ಡ್ರೆಸ್, ಮತ್ತೆ ಹೆಣ್ಣು ಡ್ರೆಸ್ ಬದಲಿಸಿ ರಂಗದ ಮೇಲೆ ಬರಬೇಕಾಗುತ್ತಿತ್ತು.

ನಾಟಕದ ಕೊನೇ ಭಾಗ ಬರುವವರೆಗೂ ಯಾವ ತಪ್ಪೂ ಆಗದಂತೆ ಚಡ್ಡಿ ಸುಬ್ಬಣ್ಣ ಗಂಡು, ಹೆಣ್ಣು ಪಾತ್ರವನ್ನು ಚೆನ್ನಾಗಿ ಮಾಡಿದರು.

ಗಂಡು ಪಾತ್ರವಹಿಸಿ ನಿರ್ಗಮಿಸಿದ ನಂತರ ಸಖೀ ಪಾತ್ರದ ಸಂದರ್ಭ ಬರಲು ತಡವಿತ್ತು. ಚಡ್ಡಿಯಲ್ಲೇ ಕುಳಿತು, ತಲೆಗೆ ಸ್ತ್ರೀಗೆ ಬೇಕಾದ ಟೋಫನ್ ಹಾಕಿಕೊಂಡರು, ಹೆಣ್ಣಿನಂತೆ ಮುಖ ಶೃಂಗಾರ ಮಾಡಿಕೊಂಡರು ಎತ್ತರ ಬರಲು ಪ್ಯಾಡ್‌ಗಳನ್ನು ಇಟ್ಟು ರವಿಕೆ ಸಹ ಹಾಕಿಕೊಂಡರು. ರಂಗಸ್ಥಳದ ಹಿಂಭಾಗದಲ್ಲಿ ಸ್ವಲ್ಪ ಆರಾಮ ಮಾಡಿಕೊಳ್ಳೋಣ ಅಂತ ಸೀರೆಯನ್ನು ತನ್ನ ಪಕ್ಕದಲ್ಲೇ ಇಟ್ಟುಕೊಂಡರು. ತಾನು ಪ್ರವೇಶಿಸಬೇಕಾದ ಸೀನ್ ಸಮೀಪಿಸಿದಾಗ ಸೀರೆ ಉಟ್ಟು ಹೋದರಾಯಿತೆಂದು ಉದಾಸೀನವಾಗಿ ಕುಳಿತರು. ಕುಳಿತವರಿಗೆ ಒಳ್ಳೆ ನಿದ್ದೆ ಬಂದೇ ಬಿಟ್ಟಿತು. ಪಾಪ ಅದೆಷ್ಟು ರಾತ್ರಿ ನಾಟಕಗಳಿಗಾಗಿ ನಿದ್ದೆ ಬಿಟ್ಟಿದ್ದರೋ ಏನೋ ಇನ್ನೇನು ಸಖೀ ಪಾತ್ರಕ್ಕೆ ರಂಗ ಪ್ರವೇಶ ಮಾಡಬೇಕಾಗಿದ್ದ ಸಮಯ, ಯಾರೋ "ಚಡ್ಡಿ ಸುಬ್ಬ" ನಿನ್ನ ಪ್ರವೇಶ ಈಗ ಇದೆ ಬಾ ಅಂತ ಕೂಗಿದ್ದು ಕೇಳಿಸಿತು. ನಿದ್ದೆ ಮಂಪರಲ್ಲಿದ್ದ ಚಡ್ಡಿ ಸುಬ್ಬಣ್ಣ, ಕೈಯಲ್ಲಿ ಚಾಮರ ಹಿಡಿದು ರಂಗಸ್ಥಳಕ್ಕೆ ಬಂದು ರಾಣಿಯ ಒಂದು ಪಕ್ಕ ಚಾಮರ ಬೀಸಲು ಸಿದ್ಧರಾಗಿ ನಿಂತರು. ಇಷ್ಟೂ ಕತ್ತಲಲ್ಲೇ ಆಯಿತು ರಂಗಮಂದಿರಕ್ಕೆ ಬೆಳಕನ್ನು ಬಿಟ್ಟರು. ರಾಣಿ ಸಿಂಹಾಸನದಲ್ಲಿ ಆಸೀನರಾಗಿದ್ದಾಳೆ. ಎಡಗಡೆ ಸಖಿ ಚಾಮರ ಬೀಸುತ್ತಿದ್ದಾಳೆ. ಇನ್ನೊಂದು ಕಡೆ ಚಡ್ಡಿ ಸುಬ್ಬ ಚಾಮರ ಬೀಸುವುದರಲ್ಲೇ ತಲ್ಲೀನನಾಗಿದ್ದ.

ಪ್ರೇಕ್ಷಕರ ಕಡೆಯಿಂದ ಶಿಳ್ಳು, ಚಪ್ಪಾಳೆ ನಗೆಯ ಅಲೆಯೇ ಎಬ್ಬಿತು. ಚಡ್ಡಿಸುಬ್ಬ ತನ್ನ ಟ್ರೇಡ್‌ಮಾರ್ಕ್ ಪಟ್ಟಾಪಟ್ಟಿ ಚಡ್ಡಿಯಲ್ಲಿ ನಿಂತು ರಾಣಿಗೆ ಗಾಳಿ ಬೀಸುತ್ತಿದ್ದಾನೆ. ಮೇಲರ್ಧ ಪೂರ್ತಾ ಹೆಣ್ಣು ಜನರೇಕೆ ಹೀಗೆ ನಗುತ್ತಿದ್ದಾರೆ, ಶಿಳ್ಳೆ ಹೊಡೆಯುತ್ತಿದ್ದಾರೆ ಅಂತ ಸುಬ್ಬನಿಗೆ ಗೊತ್ತಾಗಲಿಲ್ಲ, ಬೇರೆ ವಿಧಿಯಿಲ್ಲದೆ ಪರದೆ ಇಳಿಸಲಾಯಿತು. ಸಹನಟನಟಿಯರು ಹೇಳಿದ ಮೇಲೆಯೇ ಚಡ್ಡಿ ಸುಬ್ಬನಿಗೆ ತಾನು ಸೀರೆ ಉಡಲು ಮರೆತು ಬಂದು ಪಟ್ಟಾಪಟ್ಟಿ ಚಡ್ಡೀಲಿ ನಿಂತು ರಾಣಿಗೆ ಸಖಿಯಾಗಿ ಗಾಳಿ ಬೀಸಿದೆ ಅಂತ ತಿಳಿದದ್ದು.

❋



ಇಂತಹ ಘನಕಾರ್ಯಕ್ಕೆ ಸಾವಿರಾರು ರೂಪಾಯಿ ವೇತನ !!

Mailing Date
5th of every month
Mailed at: MBC Bangalore GPO

CPMG/KA/BGW-544/2009-2011
RNI-KAR-KAN / 2005/ 15457

Printed by: V.R. NATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003. Printed at: RAVI GRAPHICS, 58/2, 2nd Main Road, Industrial Town, Rajajinagar, Bangalore - 560 010. PH : 4088 9999.
Editor : M. SHIVAKUMAR